ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಅಕ್ಟೋಬರ್ ೩೦, ೨೦೧೪ (ಕಾರ್ತೀಕ ೮, ಶಕ ವರ್ಷ ೧೯೩೬) Bangalore, Thursday, October 30, 2014 (Karthika 8, Shaka Varsha 1936)	ಸಂಚಿಕೆ ೪೩ Issue 43

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

LAW SECRETARIAT

Sub : Fixation of term of office and other conditions of service of Dr. Justic S.R. Nayak, Chairman, Law Commission of Karnataks, Bangalore-Orders-reg-

Read : 1) G.O. No: Law 42 HRC 2008, dt: 12-01-2009.

2) Govt. Notification No: LAW 26 KLM 2014, dt: 26-06-2014.

3) D.O. No: LCK/02/2014, dt: 30-06-2014 from Dr. Justice S.R. Nayak, Chairman, Law Commission of Karnataka.

PREAMBLE :

Karnataka State Law Commission with headquarters at Bangalore was constituted under G.O. dated: 12-01-2009, read (1) above. After the completion of the term of office of the First Chairman of the Law Commission of Karnataka Dr. Justice V.S. Malimath, on 12-01-2014, Dr. Justic S.R. Nayak was appointed as the chairman, Law Commission of Karnataka under Government Notification dt: 26-06-2014, read at (2) above, In pursuance to the orders, Dr. Justice S.R. Nayak has assumed office of the Chairman, Law Commissions of Karnataka on 27-06-2014(F/N).

In accordance with the G.O. dated: 12-01-2009 and Notification dated: 26-06-2014 the term of office and other condition of service of Dr. Justic S.R. Nayak, Chairman, Law Commission of Karnataka are required to be issued separately with consultation with the Finance Department, Accordingly, the matter has been examined with the Finance Department.

Hence the Orders.

ORDER NO. LAW 47 KLM 2014, BANGALORE, DATED: 6th August 2014

The term of office of Hon'ble Dr. Justic S.R. Nayak, Chairman, Law Commission of Karnataka, Bangalore shall be five years. His pay, allowances and all other conditions of service shall be the same as that of a Chief Justice of High Court.

Provided that if he is at the time of his appointment in receipt of or eligible to receive any pension and has elected to draw or receive the pension (other than disability or wound pension) in respect of any previous service under the Government of the Union or of the State, his salary in respect of Service as the Chairman shall be proportionately reduced:-

i. By the amount of pension;

ii. If he was before assuming office, receiving in lieu of a portion of pension due to him in respect of such previous service, the commuted value thereof, by the amount of that portion of the pension; and

iii. By any other form of retirement benefits, being drawn or availed or to be drawn or availed by him;

This is issued with the concurrence of the Finance Department vide its U.O. Note No: ಆಇ 216 ವೆಚ್ಚ-10/2014, dt: 31.07.2014.

By Order and in the Name of the Governor of Karnataka,

PR. 689
SC.200

K.G.V. Murthy
Special Secretary to Government,
(Inter-State Water Disputes & Human Rights)
Law Department

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಬಿ.ಯು.ಎಂ.ಎಸ್. ಪದವಿ ಕೋರ್ಸ್‌ಗೆ ಪ್ರವೇಶ ಪಡೆಯಲಿಚ್ಚಿಸಿರುವ ವಿದ್ಯಾರ್ಥಿಗಳಿಗೆ ಉರ್ದು ಭಾಷಾ ಪ್ರವೇಶ ಪರೀಕ್ಷೆಯನ್ನು ನಡೆಸಲು ಹಾಗೂ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಪ್ರವೇಶ ನೀಡಲು ಅಧಿಕಾರ ನೀಡುವ ಬಗ್ಗೆ ಹೊರಡಿಸಿದ ಸರ್ಕಾರಿ ಆದೇಶ ಸಂಖ್ಯೆ: ಆಕುಕ 148 ಪಿಟಿಡಿ 2014, ದಿನಾಂಕ: 03.06.2014ರ ಆದೇಶವನ್ನು ಹಿಂಪಡೆದು ಮರು ಆದೇಶ ಹೊರಡಿಸುವ ಬಗ್ಗೆ-ಆದೇಶ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಆಕುಕ 148 ಪಿಟಿಡಿ 2014, ದಿನಾಂಕ: 03.06.2014.
2. ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: 11-76/2011, ಯು.ಜಿ. ದಿನಾಂಕ: 24.05.2013.

ಪ್ರಸ್ತಾವನೆ:-

ಮೇಲೆ ಓದಲಾದ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬಿ.ಯು.ಎಂ.ಎಸ್ ಪದವಿ ಶಿಕ್ಷಣಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು 2014-15ನೇ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ "ಉರ್ದು ಪ್ರವೇಶ ಪರೀಕ್ಷೆಯನ್ನು ಪಾಸು ಅಥವಾ ತೇರ್ಗಡೆ ಹೊಂದಿರತಕ್ಕದ್ದೆಂದು ಆದೇಶಿಸಲಾಗಿದೆ."

ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್, ನವದೆಹಲಿ, ಇವರು ಮೇಲೆ ಓದಲಾದ ಉಲ್ಲೇಖ (2)ರ ತನ್ನ ಅಧಿಸೂಚನೆಯಲ್ಲಿ ಬಿ.ಯು.ಎಂ.ಎಸ್. ಪದವಿ ಶಿಕ್ಷಣಕ್ಕೆ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು 10ನೇ ತರಗತಿಯಲ್ಲಿ ಉರ್ದು ಅಥವಾ ಅರೇಬಿಕ್/ಪರ್ಶಿಯನ್ ಭಾಷೆಯಲ್ಲಿ ಒಂದು ಭಾಷೆಯಾಗಿ ತೇರ್ಗಡೆ ಹೊಂದಿರಬೇಕೆಂದು ಅಥವಾ ಸರ್ಕಾರದಿಂದ ಅಧಿಕಾರ ಪಡೆದಿರುವ ವಿಶ್ವವಿದ್ಯಾಲಯ/ಬೋರ್ಡ್/ನೋಂದಾಯಿತ ಸಂಸ್ಥೆಗಳು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉರ್ದು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದೆಂದು ನಿಗದಿಪಡಿಸಿದೆ.

ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ/ಖಾಸಗಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬಿ.ಯು.ಎಂ.ಎಸ್ ಪದವಿ ಕೋರ್ಸ್‌ಗೆ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿ.ಯು.ಎಂ.ಎಸ್ ಕೋರ್ಸ್‌ನ್ನು ಆಯ್ಕೆ ಮಾಡಿಕೊಂಡಲ್ಲಿ ಅವರುಗಳಿಗೆ ಪ್ರವೇಶ ನೀಡುವ ಮೊದಲು ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಂಶುಪಾಲರು 10ನೇ ತರಗತಿ ಸಮಾನವಾದ ಉರ್ದು ಭಾಷಾ ಪರೀಕ್ಷೆಯನ್ನು ಜರುಗಿಸಬೇಕು ಅಂಥಹ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಬಿ.ಯು.ಎಂ.ಎಸ್. ಪ್ರವೇಶವನ್ನು ನೀಡಬೇಕು ಈ ಕಾರಣಕ್ಕಾಗಿ ಅಂಥ ಪರೀಕ್ಷೆಯನ್ನು ನಡೆಸಿ ಅದರಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಸಂಬಂಧಿಸಿದ ಯುನಾನಿ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ನೀಡಿ ಸರ್ಕಾರವು ಆದೇಶವನ್ನು ಹೊರಡಿಸಬೇಕೆಂದು ನಿರ್ದೇಶಕರು, ಆಯುಷ್ ಇಲಾಖೆಯವರು ಮೇಲೆ ಓದಲಾದ ಉಲ್ಲೇಖ (3)ರ ತಮ್ಮ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಕರ್ನಾಟಕ ರಾಜ್ಯದಲ್ಲಿರುವ ಯುನಾನಿ ವೈದ್ಯಕೀಯ ಕಾಲೇಜುಗಳಲ್ಲಿ ಬಿ.ಯು.ಎಂ.ಎಸ್. ಪದವಿ ಕೋರ್ಸ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಪರೀಕ್ಷೆಯಲ್ಲಿ ಬಿ.ಯು.ಎಂ.ಎಸ್ ಪ್ರವೇಶಾತಿಗೆ ಅರ್ಹತೆ ಪಡೆದ ನಂತರ ಪ್ರವೇಶಾತಿಗೆ ಮೊದಲು ಸಂಬಂಧಪಟ್ಟ ಯುನಾನಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳೇ ಉರ್ದು ಪ್ರವೇಶ ಪರೀಕ್ಷೆಯನ್ನು ನಡೆಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅವರುಗಳೇ ಪ್ರಮಾಣ ಪತ್ರವನ್ನು ವಿತರಿಸುವಂತೆ ಆದೇಶ ನೀಡುವ ಅವಶ್ಯವಿದೆ ಎಂದು ಕಂಡುಬಂದುದರಿಂದ ಈಗಾಗಲೇ ಸರ್ಕಾರವು ಉಲ್ಲೇಖ (1)ರಲ್ಲಿ ಹೊರಡಸಿದ ಆದೇಶ ಸಂಖ್ಯೆ: ಆಕುಕ 148 ಪಿಟಿಡಿ 2014, ದಿನಾಂಕ: 03.06.2014ರ ಆದೇಶವನ್ನ ಹಿಂಪಡೆದು ಈ ಕೆಳಗಿನಂತೆ ಮರು ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 148 ಪಿಟಿಡಿ 2014, ಬೆಂಗಳೂರು, ದಿನಾಂಕ: 18-08-2014.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 148 ಪಿಟಿಡಿ 2014, ದಿನಾಂಕ: 03.06.2014ರ ಆದೇಶವನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಮುಂದುವರೆದು ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ/ಖಾಸಗಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬಿ.ಯು.ಎಂ.ಎಸ್. ಪದವಿ ಶಿಕ್ಷಣಕ್ಕೆ ಪ್ರವೇಶ ಬಯಸುವ ಸರ್ಕಾರಿ ಕೋಟಾದ ವಿದ್ಯಾರ್ಥಿಗಳು ಮತ್ತು ಆಡಳಿತ ಮುಂಡಳಿಯ ಕೋಟಾದ ವಿದ್ಯಾರ್ಥಿಗಳು 2014-15ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಬಿ.ಯು.ಎಂ.ಎಸ್ ಪ್ರವೇಶಕ್ಕೆ ಎಲ್ಲಾ ವಿದ್ಯಾರ್ಹತೆಯನ್ನು ಹೊಂದಿದ್ದರೂ ಪ್ರವೇಶಾತಿಗೆ ಮೊದಲು 10ನೇ ತರಗತಿಯ ಮಟ್ಟದ ಉರ್ದು ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯವಾಗಿರುತ್ತದೆ, ಆದ್ದರಿಂದ ಸಂಬಂಧಿಸಿದ ಮಹಾವಿದ್ಯಾಲಯಗಳಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಉರ್ದು ಭಾಷಾ ಪರೀಕ್ಷೆಯನ್ನು ನಡೆಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸೂಕ್ತ ಪ್ರಮಾಣ ಪತ್ರವನ್ನು ವಿತರಿಸುವ ಅಧಿಕಾರವನ್ನು ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರುಗಳಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

PR.690
SC- 500

ಬಿ.ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳು, 1977ರ ಅಡಿಯಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಅಧಿಕಾರ ವಿನಿಯೋಗದ ಬಗ್ಗೆ

ಓದಲಾಗಿದೆ : ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳು, 1977.

ಪ್ರಸ್ತಾವನೆ :

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಈಗಿರುವ ಅಧಿಕಾರಗಳನ್ನು ರದ್ದುಮಾಡಿ, ಹೊಸದಾಗಿ ಅಧಿಕಾರ ನಿಯೋಗ ಮಾಡುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳು, 1977ರ ನಿಯಮ 6ರ ಉಪ ನಿಯಮ (2), ಹಾಗೂ ನಿಯಮ 30ರ ಉಪ ನಿಯಮ (2), ಹಾಗೂ (3)ರ ಪ್ರಕಾರ ಅಧಿಕಾರ ವಿನಿಯೋಗದ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 72 ಸಮನ್ವಯ 2014, ಬೆಂಗಳೂರು, ದಿನಾಂಕ: 21ನೇ ಆಗಸ್ಟ್, 2014

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಈಗಿರುವ ಅಧಿಕಾರಗಳನ್ನು ರದ್ದುಪಡಿಸಿ, ಅನುಬಂಧದಲ್ಲಿ ತೋರಿಸಿದಂತೆ ಅಧಿಕಾರ ವಿನಿಯೋಗ ಮಾಡಲಾಗಿದೆ.

2. ಈ ಅಧಿಕಾರಗಳನ್ನು ನಿಯಮಗಳಿಗೆ ವಿರೋಧವಾಗುವಂತೆ ಹಾಗೂ ಕ್ರಮ ಬದ್ಧವಾಗಿ ಬಳಸಬೇಕು. ಸಮಾಲೋಚನೆ ಮಾಡಬೇಕಾದಲ್ಲಿ ಮತ್ತು ಸಹಮತಿ ಅಗತ್ಯವಿದ್ದಲ್ಲಿ, ಅದನ್ನು ಪಡೆದು ಅಧಿಕಾರ ಉಪಯೋಗಿಸಬೇಕು. ಈ ಆದೇಶಗಳು ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಇತರ ಇಲಾಖೆಗಳ ಒಪ್ಪಿಗೆ ಅವಕಾಶಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಮುಖ್ಯ ಮಂತ್ರಿಗಳ, ಸಚಿವರ ಸಂಪುಟದ ಹಾಗೂ ರಾಜ್ಯಪಾಲರ ಒಪ್ಪಿಗೆಗೆ ಸಂಬಂಧಿಸಿದಂತೆ ಒಳಪಟ್ಟಿರುತ್ತದೆ.

3. ಸಚಿವಾಲಯ ಕೈಪಿಡಿಯ ಕಂಡಿಕೆ 68ರಲ್ಲಿ ನಿಗಧಿಪಡಿಸಿರುವಂತೆ, ಹಂತ ಜಿಗಿತವಿರುವ ಪ್ರಕರಣಗಳಲ್ಲಿ, ಸಕ್ಷಮ ಪ್ರಾಧಿಕಾರ ಆದೇಶ ಮಾಡಿದ ತರುವಾಯ, ಕೈಗೊಂಡ ನಿರ್ಣಯವನ್ನು ಮಧ್ಯದ ಎಲ್ಲಾ ಅಧಿಕಾರಿಗಳ ಗಮನಕ್ಕೆ ತರುವುದಕ್ಕಾಗಿ ಕಡತವನ್ನು ಅವರೆಲ್ಲರ ಮೂಲಕ ಶಾಖೆಗೆ ಹಿಂತಿರುಗಿಸಬೇಕು.

4. ಅನುಬಂಧದಲ್ಲಿ ತೋರಿಸಿರುವ ವಿಷಯಗಳಲ್ಲದ ಪ್ರಕರಣಗಳನ್ನು, ಸರ್ಕಾರದ ಕಾರ್ಯದರ್ಶಿಗಳು (ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು–2, ಮತ್ತು ಸರ್ಕಾರದ ವಿಶೇಷ ಕಾರ್ಯದರ್ಶಿಗಳು ಸೇರಿದಂತೆ) ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳು, 1977ರ ನಿಯಮ 30 (2)ರಲ್ಲಿ ನಿರ್ದೇಶಿಸಿರುವಂತೆ ಇತ್ಯರ್ಥಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಆರ್. ರವಿಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಸಮನ್ವಯ)

ANIMAL HUSBANDRY AND FISHERIES DEPARTMENT VIKASA SOUDHA. BANGALORE.

PART-I

ANNEXURE TO GOVERNEMENT ORDER

Sl. No.	Subject	D.O./Under Secretary	DS/JS/AS	Secretary
1	2	3	4	5
	1. GENERAL (Applicable to all Sections)			
1)	Calling for report from Heads of Departments and Sub-ordinate officers in respect of applications, representations, etc., received directly in the Secretariat or through the Minister for Animal Husbandry & Minister for Fisheries or through the Chief Minster or through the Public Grievances Cell of DPAR or any other source	Approves and returns		
2)	Rejecting impermissible of unlawful requests made through representations of this secretariat or to Minister for Animal Husbandry & Minister for Fisheries or to Chief Minster or through the Public Grievances Cell of DPAR or to any other authority, which has been referred to Animal Husbandry & Fisheries department for disposal	Approves and returns		

1	2	3	4	5
2(a)	Endorsement to the Public (other than Political functionaries like Legislators Parliamentarian, Ministers Speaker of the LA/Chariman of LC, etc) giving factual information about issues raised in their representation made to any authority but received for necessary action / disposal in Animal Husbandry & Fisheries department including rejection of their request based on facts or law or policy	Approves and returns (Incase of endorsements to political functionaries approval of the Secretary shall be sought for the draft communication through the DS/JS/AS		
3)	Issue of Government Notification, Government order, Government letter, Official Memorandum, U.O. Note and such other communication after decision has been taken by the appropriate authority), on the note file.	Approves and returns		
4)	Referring files for opinion/advice of the legal cell, FD, DPAR and other Secretariat Departments (in case where Animal Husbandry and Veterinary Services and Fisheries Department has to come to a tentative conclusion before referring files to FD, DPAR and other departments of Secretariat then the file may be referred to such departments through higher officer)	Refers		
5)	Moving Law Department or legal Cell of Animal Husbandry and Veterinary Services and Fisheries Department or Director of Prosecutions to issue authorization to Government Advocate to appear and defend cases filed against Government Officers in Courts of Law / Tribunals.	Moves		
6)	Approval of written statements prepared by Government advocates where to substantial matters of law on complications are involved (complicated cases may be submitted to the higher authorities, indicating the complication involved which necessitated the approval of higher authorities)	Approves and returns		
6(a)	(i) Approval to file Caveat Applications before Courts of Law/Tribunals First application.	Prepares and submits	Scrutinises and submits	Approves and returns
	(ii) Renewal of Caveat Applications filed at (i) above	Prepares and submits	Approves and returns	
7)	Forwarding copies of orders/judgments of Courts of Law, Tribunal to heads of departments and other Sub-ordinate Officers where the interest of the Government are not affected	Approves and returns		
8)	Moving Government of India for revalidation of its lapsed sanctions.	Approves and returns		
9)	Referring files to Budget-II Section of Finance Department to intimate whether money has been credited by the Government of India to the State Account, through the Reserve Bank of India in respect of financial sanctions given by Government of India.	Refers		
9(a)	Release of financial assistance received from Government of India to implementing agencies. (Government Department, Government Companies or Corporations of any other Government Public, Private body or individual)	Prepares and submits	Scruitnises and submits	Approves and returns

1	2	3	4	5
10)	Replies to LA/LC Questions, adjournment motions, notices under various rules, etc.	Prepares and submits	Scruitnises and submits	Scruitnises and submits to Minister for Animal Husbandry and Minister for Fisheries
10) (a)	Replies to LA/LC Questions, notices,etc., to be answered by some other department of Secretariat (By a Minister other than Minister for Animal Husbandry and Minister for Fisheries)	Prepares and submits	Scruitnises and submits	Approves and returns
11	Replies to Legislature Committees like Public Accounts Committee, Petitions, Assurance Committee on Public Undertakings, Subject Committee and all other Committees of State Legislature.	Prepares and submits	Scruitnises and submits	Approves and returns
12)	Reply to Audit paras, Audit Reports and other audit matters raised by the Accountant General	Prepares and submits	Scruitnises and submits	Approves and returns
13)	Informing Commissioner, Animal Husbandry & Veterinary Services & Director, Fisheries Department and other sub-ordinate officer about the rejection of their proposal, when such proposals are rejected by FD, DPAR or any other departments which have to be consulted by Animal Husbandry & Veterinary Services & Director, Fisheries Department accordingly to Transaction of Business Rules	Approves and issues		
14)	Calling for information from the Commissioner, Animal Husbandry & Veterinary Services & Director, Fisheries Department or other sub-ordinate Officers sought by FD, DPAR and other consulted department.	Approves and issues		
15)	Conveying clarifications issued by FD, DPAR and other consulted departments concerned with the subject matter.	Approves and issues.		
16)	Furnishing factual clarifications/copies of documents sought by Government of India, issued by FD, DPAR or any other Secretariat Department.	Clarifies/Supplies		
17)	Making factual corrections of errors that might have crept into Government orders and other communications issued by Government.	Approves and issues		
18)	Sending files to call book and recalling them from call book	Approves and issues		
19)	Additional allotment of funds upto and inclusive of Rs------ lakhs in any financial year beyond budget provision; and re-appropriations of like amounts.	Prepares and submits	Scruitnises and submits	Approves and returns
20)	Sanction of loan, grant-in-aid, subsidy or any other financial assistance out of State Government funds to Government Companies / Corporation / Boards or private institutions.	Prepares and submits	Scruitnises and submits	Approves and returns
21)	Replies to Parliament Question, Notice, etc.	Prepares and submits	Scruitnises and puts up	Approves and returns

1	2	3	4	5
22)	Acceptance of any tenders or quotations which are beyond the powers of the Commissioner, Animal Husbandry & Veterinary Services & Director, Fisheries Department.	Prepares and submits	Scruitnises and puts up	Scruitnises and submits to Minister for Animal husbandry and Minister for Fisheries.
23)	Counter signature of any grant-in-aid bill or payees receipt or such other bills submitted by the beneficiary individual, or organization-be it Government, Public or Private company, corporation, Society or any other nature of organization.	Prepares and submits	Scruitnises and submits	Approves and returns
24)	Rejecting proposals of the Commissioner, Animal Husbandry & Veterinary Services & Director, Fisheries Department or other sub-ordinate to Government, when such proposal is not in accordance with law, Rules Regulations Government Orders, Policy or Practice. Officers sought by FD, DPAR and other consulted department.	Prepares and submits	Approves and issues	
25)	Reminders to the Commissioner, Animal Husbandry & Veterinary Services & Director, Fisheries Department or other sub-ordinate to Government including Government boards & corporations or Public or Private and other Secretariat Departments	To issue reminder under his / her signature.		
26)	Reminders to Government of India and to the Officers of Government Secretariat of the above the rank of Deputy Secretary, KPSC, Accountant General.	Approves and issues		

PART – II

ANIMAL HUSBANDRY AND VETERINARY SERVICES

1	2	3	4	5
1)	Appointment / Transfer and Postings / Deputations.	Prepares and submits	Scruitnises and Submits	Scrutinises and Submits to Minister for Animal Husbandry.
2)	Change of Designation of Gazetted officers	Prepares and submits	Scruitnises and Submits	Scrutinises and Submits to Minister for Animal Husbandry.
3)	Sanction of all kinds of leave in accordance with the rules, including leave on medical grounds to Government servants who are under orders of transfer in accordance with the rule 83 in KCSRs (both Gazetted and Non-gazetted)	Prepares and submits	Scruitnises and Submits	Scrutinises and Submits to Minister for Animal Husbandry.
4)	Publication of draft seniority list of Group-A Officers, to invite objection.	Prepares and submits	Scruitnises and Submits	Approves and returns
5)	Publication of final seniority list and gradation list.	Prepares and submits	Scruitnises and Submits	Approves and returns
6)	Sanction of charge allowance Gazetted Officers	Prepares and submits	Approves and returns.	
7)	Sanction of leave salary to Gazetted Officers under Rule of 198 of KCSRs.	Prepares and submits	Approves and returns.	

1	2	3	4	5
8)	Sanction of LTC /HTC	Prepares and submits	Scruitnises and Submits	Approves and returns
9)	Compulsory waiting u/r 8(15)(f)of KCSRs – sanction	Prepares and submits	Scruitnises and Submits	Approves and returns
10)	Sanction of G.P.F. withdrawal and other advances and re-imbursement to the eligible Government servants in accordance with the rules.	Prepares and submits	Scruitnises and Submits	Approves and returns
11)	Request to sanction of G.P.F withdrawal not in accordance with rules.	Prepares and submits	Scruitnises and Submits	Approves and returns
12)	Compulsory/Voluntary retirement of Government servants under Rule 285 of KCSRs	Prepares and submits	Scruitnises and Submits	Scrutinises and Submits to Minister for Animal Husbandry.
13)	Sanction of encashment of EL	Prepares and submits	Approves and returns	
13)(a)	(a) Condonation of delay in preferring arrears of claims.	Prepares and submits	Approves and returns	
14)	Death while in service obsequies in respect of Gazetted Officers	Prepares and submits	Approves and returns	
15)	Issue of Officiation Certificate u/r 53 of KCSRs	Prepares and submits	Approves and returns	
16)	Medical Re-imbursement	Prepares and submits	Scruitnises and Submits	Approves and returns
17)	Permission to Government servants to retire from service on super-annuation.	Prepares and submits	Scruitnises and Submits	Approves and returns
18)	Deputation for training outside State, but within India.	Prepares and submits	Scruitnises and Submits	Scrutinises and Submits to Minister for Animal Husbandry.
19)	Deputation for training outside India.	Prepares and submits	Scruitnises and Submits	Scrutinises and Submits to Minister for Animal Husbandry before sending to DPAR (AR) for issue of deputation orders
20)	Deputation of Gazetted Government servants to other departments.	Prepares and submits	Scruitnises and Submits	Scrutinises and Submits to Minister for Animal Husbandry.
21)	Creation of Posts: i) Sanction for creation of new posts	Prepares and submits	Scruitnises and Submits	Scrutinises and smbmits to Minister after FD's concurrence approved.
	ii) Continuance of temporary posts	Prepares and submits	Scruitnises and Submits	Approves and returns
	iii) Making temporary posts permanent after 5 years	Prepares and submits	Scruitnises and Submits	Approves and returns
22)	No objection Certificate for obtaining passports.	Prepares and submits	Scruitnises and Submits	Approves and returns
23)	Permission to prosecute further studies as per rules.	Prepares and submits	Scruitnises and Submits	Approves and returns

1	2	3	4	5
24)	Acceptance of Property returns of Group 'A' officers.	Prepares and submits	Scruitnises and Submits	Approves and returns
25)	Permission for disposal or acquisition of movable and immovable properties.	Prepares and submits	Approves and returns upto Rs.1.00 lakh, scrutinizes and submits.	Approves and returns.
26)	Issue of notice under rule 11(4) or order under rule 13(1) or action under rule 11-A of the KCS (CCA) Rules. 1957.	Prepares and submits	Scruitnises and Submits	Scrutinises and Submits to Minister for Animal Husbandry
26 (a)	a) Sanction for institution of Departmental proceedings under Rule 214 (b) (i) of KCSRs.	Prepares and submits	Scruitnises and Submits	Scrutinises and Submits to Minister for Animal Husbandry/ Chief Minister as the cases maybe.
27)	Consultation with Karnataka Public Service Commission before imposition of penalty, where necessary.	Prepares and submits	Approves and returns	
28)	Action under Rule 11(5) of the KCS (CCA) Rules, 1957.	Prepares and submits	Scruitnises and Submits	Scrutinises and takes decision.
28)(a)	a) Decision for Government under Rule 214 (2) (b) (iii) of KCSRs.	Prepares and submits	Scruitnises and Submits	Scrutinises and takes decision.
29)	Action under Rule 11 (6) of the KCS (CCA) Rules, 1957 and similar action in respect of departmental enquires under rule 214 of KCSRs	Prepares and submits	Approves and returns	
30)	Action under Rule 12 of the KCS (CCA) Rules, 1957 in respect of Government Servants upto and inclusive of Deputy Directors Joint Directors and Additional Directors	Prepares and submits	Scruitnises and Submits	Full powers are vested with the secretary to take action under Rule 12 of the KCS (CCA) Rules, 1957. Seniority lists and submits to the Animal husbandry Minister.
31)	Supply of a copy of the report of the inquiring Authority, or a copy of the findings of inquiring officers with the recommendations of the Lokayukta or an Uplokayukta, as the case may be, before taking action under Rule 11A of the KCS (CCA) Rules, or any other rule	Prepares and submits	Approves and returns	
32)	Extension of time to submit written statement of defence under Rule 11(4) or any other similar rule under the CCA Rules. (including decision on such matters in respect of disciplinary proceedings initiated under Rule 214 of KCSRs)	Prepares and submits	Approves and returns	
33)	Decision relating to supply of copies, documents, etc., sought by the AGO, in any departmental enquiry.	Prepares and submits	Decides and returns	

1	2	3	4	5
34)	All interm correspondence between the disciplinary authority (viz., Government) and the Aggrieved Government Servant (other than matters referred to an item 33 and 34 above) and inquiring Authority (including Lokayukta and uplokayukta) the Presenting Officers, the Head of the Department or other officers subordinate to Government and the KPSC (excluding the one at item 28)	Corresponds (unless records reasons as to why it should be seen by the higher officers)		
35)	Communication of orders under Rule 12A of the KCS (CCA) Rules, 1957, (including in respect of disciplinary proceedings initiated under Rule 214 of KCSRs)	Communicates		
35)(a)	a) Appeals to Government its capacity as appellate authority under the KCS (CCA) Rules 1957.	Prepares and submits	Scruitnises and Submits	Takes decision
36)	References to DPAR (SR) seeking clarifications about any enquiry proceedings etc.	Prepares and puts up	Refers	
37)	Seeking any clarification on the Enquiry Officers Report from the inquiring officers of Lokayukta and Upalokayakta).	Prepares and submits	Approves and returns	
38)	Supply of records and other documents to the Enquiry officers.	Approves and issues		
39)	Issue of Government Order prescribing standard terms and conditions of deputation to foreign services	Prepares and submits	Approves and returns	
40)	Extension of Probationary period of Gazetted and non-gazetted officers.	Prepares and submits	Approves and returns	
41)	Treating the leave applied for u/r 106/A both in respect of Gazetted and Non-Gazetted officers.	Prepares and submits	Approves and returns	
42)	Reference of cases for enquiry and report, on the basis of complaints petitions received or otherwise.	Prepares and submits	Approves and returns	
43)	Rejecting request for employment, regularization of services, etc., made by those who are ineligible for such employment or regularization (including request for compassionate appointment)	Prepares and submits	Approves and returns	
44)	Issuing clarifications regarding regularization of daily wages on the basis of advice terndered by DPAR (Service Rules)	Prepares and submits	Approves and returns	
45)	Suspension of Non-Gazetted Government employees at the request of the Lokayuta, COD or other authorities.	Prepares and submits	Approves and returns	
46)	Suspension of Gazetted Officers	Prepares and submits	Scruitinises and submits	Scrutinises and submits to Minsiter of Animal Husbandry/ Chief Minsiter as the case may be.

1	2	3	4	5
47)	Quarterly return relating to reservations for SCs/STs in direct recruitment and submits promotions to be submitter DPAR	Prepares and submits	Approves and returns	

PART – II-A

DEPARTMENT OF FISHERIES

1	2	3	4	5
1)	Appointment / Transfer and Postings / Deputations.	Prepares and submits	Scruitnises and Submits	Scrutinises and Submits to Minister for Fisheries.
2)	Change of Designation of Gazetted officers	Prepares and submits	Scruitnises and Submits	Scrutinises and Submits to Minister for Fisheries
3)	Sanction of all kinds of leave in accordance with the rules, including leave on medical grounds to Government servants who are under orders of transfer in accordance with the rule 83 in KCSRs (both Gazetted and Non-gazetted)	Prepares and submits	Scruitnises and Submits	Scrutinises and Submits to Minister for Fisheries
4)	Publication of draft seniority list of Gazetted Officers, to invite objection.	Prepares and submits	Scruitnises and Submits	Approves and returns
5)	Publication of final seniority list and gradation list.	Prepares and submits	Scruitnises and Submits	Approves and returns
6)	Sanction of charge allowance Gazetted Officers	Prepares and submits	Approves and returns.	
7)	Sanction of leave salary to Gazetted Officers under Rule of 198 of KCSRs.	Prepares and submits	Approves and returns.	
8)	Sanction of LTC /HTC	Prepares and submits	Scruitnises and Submits	Approves and returns
9)	Compulsory waiting u/r 8(15)(f)of KCSRs – sanction	Prepares and submits	Scruitnises and Submits	Approves and returns
10)	Sanction of G.P.F. withdrawal and other advances and re-imbursement to the eligible Government servants in accordance with the rules.	Prepares and submits	Scruitnises and Submits	Approves and returns
11)	Request to sanction of G.P.F withdrawal not in accordance with rules.	Prepares and submits	Scruitnises and Submits	
12)	Compulsory/Voluntary retirement of Government servants under Rule 285 of KCSRs	Prepares and submits	Scruitnises and Submits	Scrutinises and Submits to Minister for Fisheries
13)	Sanction of encashment of EL	Prepares and submits	Approves and returns	
14)	(a) Condonation of delay in preferring arrears of claims.	Prepares and submits	Approves and returns	
15)	Death while in service obsequies in respect of Gazetted Officers	Prepares and submits	Approves and returns	
16)	Issue of Officiation Certificate u/r 53 of KCSRs	Prepares and submits	Approves and returns	
17)	Medical Re-imbursement	Prepares and submits	Scruitnises and Submits	Approves and returns

1	2	3	4	5
18)	Permission to Government servants to retire from service on super-annuation.	Prepares and submits	Scruitnises and Submits	Approves and returns
19)	Deputation for training within or outside State, but within India.	Prepares and submits	Scruitnises and Submits	Scrutinises and Submits to Minister for Fisheries.
20)	Deputation for training outside India.	Prepares and submits	Scruitnises and Submits	Scrutinises and Submits to Minister for Fisheries before sending to DPAR (AR) for issue of deputation orders
21)	Deputation of Gazetted Government servants to other departments.	Prepares and submits	Scruitnises and Submits	Scrutinises and Submits to Minister for Fisheries
22)	Creation of Posts: i) Sanction for creation of new posts	Prepares and submits	Scruitnises and Submits	Scrutinises and submits to Minister on recommends after FD's concurrence /approve.
23)(a)	ii) Continuance of temporary posts	Prepares and submits	Approves and returns	
23)(b)	iii) Making temporary posts permanent after 5 years	Prepares and submits	Scruitnises and Submits	Approves and returns
24)	No objection Certificate for obtaining passports.	Prepares and submits	Scruitnises and Submits	Approves and returns
25)	Permission to prosecute further studies as per rules.	Prepares and submits	Scruitnises and Submits	Approves and returns
26)	Acceptance of Property returns of Group 'A' officers.	Prepares and submits	Scruitnises and Submits	Approves and returns
27)	Permission for disposal or acquisition of movable and immovable properties.	Prepares and submits	Approves and returns upto Rs.1.00 lakh, scrutinizes and submits.	Approves and returns.
28)(a)	Issue of notice under rule 11(4) or order under rule 13(1) or action under rule 11-A of the KCS (CCA) Rules. 1957.	Prepares and submits	Scruitnises and Submits	Scrutinises and Submits to Minister for Fisheries & Chief Minister as the cases maybe.
28(b)	a) Sanction for institution of Departmental proceedings under Rule 214 (b) (i) of KCSRs.	Prepares and submits	Scruitnises and Submits	Scrutinises and Submits to Minister for Fisheries / Chief Minister as the cases maybe.
29)	Consultation with Karnataka Public Service Commission before imposition of penalty, where necessary.	Prepares and submits	Approves and returns	
30)	Action under Rule 11(5) of the KCS (CCA) Rules, 1957.	Prepares and submits	Scruitnises and Submits	Scrutinises and takes decision.
31)	a) Decision for Government under Rule 214 (2) (b) (iii) of KCSRs.	Prepares and submits	Scruitnises and Submits	Scrutinises and takes decision.

1	2	3	4	5
32)	Action under Rule 11 (6) of the KCS (CCA) Rules, 1957 and similar acton in respect of departmental enquires under rule 214 of KCSRs	Prepares and submits	Approves and returns	
33)	Action under Rule 12 of the KCS (CCA) Rules, 1957 in respect of Government Servants upto and inclusive of Deputy Directors If Directors and above.	Prepares and submits	Scruitnises and Submits	Full powers are vested with the secretary to take action under Rule 12 of the KCS (CCA) Rules, 1957. Submits for approval of Minister for Fisheries.
34)	Supply of a copy of the report of the inquiring Authority, or a copy of the findings of inquiring officers with the recommendations of the Lokayukta or an Uplokayukta, as the case may be, before taking action under Rule 11A of the KCS (CCA) Rules, or any other rule	Prepares and submits	Approves and returns	
35)	Requiring such supply, (including in respect of Departmental proceedings initiated under Rule 214 of KCSRs)	Prepares and submits	Approves and returns	
36)	Extension of time to submit written statement of defence under Rule 11(4) or any other similar rule under the CCA Rules. (including decision on such matters in respect of disciplinary proceedings initiated under Rule 214 of KCSRs)	Prepares and submits	Approves and returns	
37)	Decision relating to supply of copies, documents, etc., sought by the AGO, in any departmental enquiry.	Prepares and submits	Decides and returns	
38)	All interm correspondence between the disciplinary authority (viz., Government) and the Aggrieved Government Servant (other than matters referred to an item 33 and 34 above) and inquiring Authority (including Lokayukta and uplokayukta) the Presenting Officers, the Head of the Department or other officers subordinate to Government and the KPSC (excluding the one at item 28)	Corresponds (unless records reasons as to why it should be seen by the higher officers)		
39)	Communication of orders under Rule 12A of the KCS (CCA) Rules, 1957, (including in respect of disciplinary proceedings initiated under Rule 214 of KCSRs)	Communicates		
40)	a) Appeals to Government its capacity as appellate authority under the KCS (CCA) Rules 1957.	Prepares and submits	Scruitnises and Submits	Takes decision
41)	References to DPAR (SR) seeking clarifications about any enquiry proceedings etc.	Prepares and puts up	Refers	
42)	Seeking any clarification on the Enquiry Officers Report from the inquiring officers of Lokayukta and Upalokayakta).	Prepares and submits	Approves and returns	

1	2	3	4	5
43)	Supply of records and other documents to the Enquire officers.	Approves and issues		
44)	Issue of Government Order prescribing standard terms and conditions of deputation to foreign services	Prepares and submits	Approves and returns	
45)	Extension of Probationary period of Gazetted and non-gazetted officers.	Prepares and submits	Approves and returns	
46)	Treating the leave applied for u/r 106/A both in respect of Gazetted and Non-Gazetted officers.	Prepares and submits	Approves and returns	
47)	Reference of cases for enquiry and report, on the basis of complaints petitions received or otherwise.	Prepares and submits	Approves and returns	
48)	Rejecting request for employment, regularization of services, etc., made by those who are ineligible for such employment or regularization (including request for compassionate appointment)	Prepares and submits	Approves and returns	
49)	Issuing clarifications regarding regularization of daily wages on the basis of advice terndered by DPAR (Service Rules)	Prepares and submits	Approves and returns	
50)	Suspension of Non-Gazetted Government employees at the request of the Lokayuta, COD or other authorities.	Prepares and submits	Approves and returns	
51)	Suspension of Gazetted Officers	Prepares and submits	Scruitinises and submits	Scrutinises and submits to Minister for Fisheries / Chief Minsiter as the case may be.
52)	Quarterly return relating to reservations for SCs/STs in direct recruitment and submits promotions to be submitted to DPAR.	Prepares and submits	Approves and returns	
53)	Recommendations to Government of India for awarding prizes etc., for Animal husbandry and Fisheries activities.	Prepares and submits	Scruitnises and submits	Approves and returns
54)	Continuance of on-going schemes.	Prepares and submits	Scruitnises and submits	Approves and returns
55)	Sanction of new schemes.	Prepares and submits	Scruitnises and submits	Approves and returns
56)	Sanction of new components in on-going schemes.	Prepares and submits	Scruitnises and submits	Approves and returns
57)	Submission of proposal seeking financial assistance from Government of India for any scheme.	Prepares and submits	Scruitnises and submits	Approves and returns
58)	Release of grants-in-aids and any other of financial assistance received from Government of India in respect of specific schemes or projects.	Prepares and submits	Scruitnises and submits	Approves and returns

1	2	3	4	5
59)	Orders of Government of India sanctioning grants to Non Government Organisations where State Government is not counter signing the grant-in-aid bill nor is expected to watch proper implementation of the project and /or utilisation of the financial as assistance sanctioned by the Government of India.	Peruses and files "D" Class		
60)	Monthly arrears statement to be furnished to DPAR including statement to be furnished to the Cabinet.	Prepares and submits	Scruitnises and submits	Approves and returns
61)	Monthly Report on implementation of Kannada as official language.	Prepares and submits	Scruitnises and submits	Approves and returns
62)	Monthly statement on redrassal of Public Grievances..	Prepares and submits	Scruitnises and submits	Approves and returns
63)	Inspection report of Accountant General.	Prepares and submits	Scruitnises and submits	Approves and returns
64)	Principal Secretary's/Secretary Tour Programme.			Prepares and submits to Chief Secretary for approval.
65)	Tour of any staff member of Animal husbandry and Fisheries Department.	Prepares and submits	Scruitnises and submits	Approves and returns
66)	All matters pertaining to the Controller and Auditor General Reports.	Decides whether Under Secretary can make decision or needs orders of higher authorities and acts accordingly, calling for information replies reminders furnishing factual information may be done at under Secretary, level, but final replies to be sent with approval of Principal Secretary.		
67)	All references from the office of the Controller and Auditor General.			
68)	All co-ordination matters. Co-ordination matters means a matter in which more than one section of Animal husbandry and Fisheries Department is concerned. Under Secretary has to do original work and cannot do post office job of sending copies of references to the concerned sections of Animal husandry and Fisheries Deparment. The Under Secretary has to collect information by himself and consolidate replies and send it.			

PART-II.B.
RECEIPT AND ISSUE SECTION

1.	Purchase of paper and toner for phot copier from HSIL/DPAR (Excutive) or Supplier of Machine of other approved Agency.	Prepares and submits		
2.	Request for supply of Stationery to be sent to Government Press and its distrbution.	Approves and returns		
3.	Preparation of Annual Compendium of Animal husbandry and Fisheries Department.	Prepares and submits	Scruitinises and submits	Approves and returns
4.	Monthly Gazette/Weekly Gazette	Prepares and submits		

K.R .RAVIKUMAR
Under Secretary to Government (I/C)
Animal husbandry & Fisheries Department (Co-ord)

PR 673
SC 100

ಆರ್ಥಿಕ ಸಚಿವಾಲಯ

ವಿಷಯ : ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಆಇ 34 ಮುಭನಿ 2000, ದಿನಾಂಕ: 20.10.2000.
2. ಸರ್ಕಾರಿ ಆದೇಶ ಸಂಖ್ಯೆ: ಆಇ 23 ಮುಭನಿ 2013, ದಿನಾಂಕ: 25.03.2014.
3. ಮಹಾಲೇಖಪಾಲರ ಪತ್ರ ಸಂಖ್ಯೆ:ಎಫ್‌ಎಂ(ಸಿ)/ಜಿ1/2014–15/26, ದಿನಾಂಕ: 05.05.2014.

ಪ್ರಸ್ತಾವನೆ :

ರಾಜ್ಯ ಸರ್ಕಾರಿ ನೌಕರರು ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ/ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿನ ಅಧಿಕಾರ ಪ್ರತ್ಯಾಯೋಜನೆ ಮಿತಿಯನ್ನು ಪರಿಷ್ಕರಿಸಬೇಕೆಂದು ಇಲಾಖೆಗಳಿಂದ ಬೇಡಿಕೆ ಬಂದ ಹಿನ್ನೆಲೆಯಲ್ಲಿ, ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪರಿಷ್ಕೃತ ಅಧಿಕಾರ ಪ್ರತ್ಯಾಯೋಜನೆಯನ್ನು ಹೊರಡಿಸಲಾಗಿತ್ತು. ಮಹಾಲೇಖಪಾಲರು ಮೇಲೆ ಕ್ರ.ಸಂ.(3) ರಲ್ಲಿ ಓದಲಾದ ಪತ್ರದಲ್ಲಿ, ಸರ್ಕಾರದ ದಿನಾಂಕ:25.03.2014ರ ಆದೇಶದಲ್ಲಿ ತಾತ್ಕಾಲಿಕ ಮುಂಗಡ ಮಂಜೂರಾತಿ ಅಧಿಕಾರಿ ಪ್ರತ್ಯಾಯೋಜನೆಯಲ್ಲಿ ಜಂಟಿ ನಿರ್ದೇಶಕರು/ನಿಯಂತ್ರಣಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು ಮಂಜೂರು ಮಾಡಬಹುದಾದ ಮೊತ್ತ ಕ್ರಮವಾಗಿ 2,00,000/– ಮತ್ತು 1,00,000/– ಬದಲಿಗೆ ಶೇಕಡವಾರು ಮಿತಿಯನ್ನು ನಿಗದಿಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ. ಮಹಾಲೇಖಪಾಲರ ಸಲಹೆಯಂತೆ ಈ ಆದೇಶವನ್ನು ತಿದ್ದುಪಡಿ ಮಾಡುವುದು ಸೂಕ್ತವೆಂದು ಸರ್ಕಾರ ಭಾವಿಸಿದೆ. ಆದುದರಿಂದ, ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ:25.03.2014ರ ಸರ್ಕಾರಿ ಆದೇಶವನ್ನು ಹಿಂಪಡೆದು, ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಮರುಪರಿಷ್ಕರಿಸಲು ನಿರ್ಧರಿಸಿ ಸರ್ಕಾರ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 23 ಮುಭನಿ 2013, ಬೆಂಗಳೂರು, ದಿನಾಂಕ: 03.06.2014

ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡಂತೆ ಮರುಪರಿಷ್ಕರಿಸಿದೆ.

I) **ತಾತ್ಕಾಲಿಕ ಮುಂಗಡ:** ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 15, 15–A ಮತ್ತು ನಿಯಮ 16ರನ್ವಯ (ಸರ್ಕಾರದ ಆದೇಶ ಸಂಖ್ಯೆ:ಆಇ 48 ಮಕಮು 1994, ದಿ:21.10.1994ರಲ್ಲಿ ಮನೆಗೆ ಕೊಂಡೊಯ್ಯುವ ವೇತನದ (Take Home Salary) ಬಗ್ಗೆ ಸೂಚಿಸಿರುವ ಮಿತಿಯಂತೆ ಹಾಗೂ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 16ರನ್ವಯ ಮರುಸಂದಾಯ ಅವಧಿಯನ್ನು ಚಂದಾದಾರನ ಲಭ್ಯವಿರುವ ಸೇವಾ ಅವಧಿಗನುಸಾರ ನಿಗದಿಪಡಿಸುವ ಷರತ್ತಿಗೆ ಒಳಪಡತಕ್ಕದ್ದು).

ಕ್ರ. ಸಂ.	ಹಂತ	ಅಧಿಕಾರ ಪ್ರತ್ಯಾಯೋಜನೆ
1	ಇಲಾಖಾ ಮುಖ್ಯಸ್ಥರು	ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.80ರಷ್ಟು ಮುಂಗಡ ಮಂಜೂರು ಮಾಡಬಹುದು.
2	ಜಂಟಿ ನಿರ್ದೇಶಕರು/ನಿಯಂತ್ರಣಾಧಿಕಾರಿಗಳು	ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.75ರಷ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು.
3	ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು	ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.70ರಷ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು.

II) **ಅಂಶಿಕ ಅಂತಿಮ ಹಣ ವಾಪಸಾತಿ:** ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 27–ಬಿರನ್ವಯ.

ಕ್ರ. ಸಂ.	ಹಂತ	ಅಧಿಕಾರ ಪ್ರತ್ಯಾಯೋಜನೆ
1	ಇಲಾಖಾ ಮುಖ್ಯಸ್ಥರು	ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.90ರಷ್ಟು ಮಂಜೂರು ಮಾಡಬಹುದು.
2	ಜಂಟಿ ನಿರ್ದೇಶಕರು/ನಿಯಂತ್ರಣಾಧಿಕಾರಿಗಳು	ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.80ರಷ್ಟು ಮಂಜೂರು ಮಾಡಬಹುದು.

3	ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು	ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.70ರಷ್ಟು ಮಂಜೂರು ಮಾಡಬಹುದು.

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ಕ್ಕೆ ಪ್ರತ್ಯೇಕವಾಗಿ ತಿದ್ದುಪಡಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಲಕ್ಷಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ, (ಆಡಳಿತ ಮತ್ತು ಮುಂಗಡ)

PR. 653

S.C. 100

ಆರ್ಥಿಕ ಸಚಿವಾಲಯ

ವಿಷಯ : ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ಸಂಖ್ಯೆಯನ್ನು ನೀಡಿರುವ ಪ್ರಕರಣಗಳಲ್ಲಿ ಬಾಕಿ ಚಂದಾ ವಂತಿಗೆ ವಸೂಲಾತಿ ಮಾಡುವ ಬಗ್ಗೆ.

ಓದಲಾಗಿದೆ :
1. ಅಧಿಸೂಚನೆ ಸಂಖ್ಯೆ:ಆಇ 48 ಮುಭನಿ 2001, ದಿನಾಂಕ: 08.03.2002.
2. ಹಿರಿಯ ಉಪ ಮಹಾಲೇಖಪಾಲರು (ಫಂಡ್ಸ್)ರವರ ಪತ್ರ ಸಂಖ್ಯೆ: FM(C)/G1/2013-14/103, ದಿನಾಂಕ: 04.09.2013.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 26 ಮುಭನಿ 2013, ದಿನಾಂಕ: 30.09.2013.
4. ಅಧಿಸೂಚನೆ ಸಂಖ್ಯೆ:ಆಇ 14 ಮುಭನಿ 2012, ದಿನಾಂಕ: 23.05.2014.

ಪ್ರಸ್ತಾವನೆ :

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳಿಗೆ ತಿದ್ದುಪಡಿ ತಂದು ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರು ದಿನಾಂಕ: 01.06.2002ರಿಂದ ಜಾರಿಗೆ ಬರುವಂತೆ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮ 5ರಡಿ ನಿಧಿಗೆ ವಂತಿಕೆ ನೀಡುವುದು ಕಡ್ಡಾಯ ಮಾಡಲಾಗಿದೆ. ಸಾಮಾನ್ಯ ಭವಿಷ್ಯ ನಿಧಿಗೆ ಪ್ರವೇಶ ಪಡೆಯಲು ಸಲ್ಲಿಸಬೇಕಾದ ನಮೂನೆ ಸಂಖ್ಯೆ-1ರ ಸೂಚನೆಗಳು ಭಾಗದ ಸೂಚನೆ ಸಂಖ್ಯೆ-5ರಲ್ಲಿ ಸಾಮಾನ್ಯ ಭವಿಷ್ಯ ನಿಧಿಗೆ ವಂತಿಕೆಯು ಮಹಾಲೇಖಪಾಲರಿಂದ ಖಾತೆ ಸಂಖ್ಯೆ ಹಂಚಿಕೆಯಾದ ನಂತರ ಪ್ರಾರಂಭಗೊಳ್ಳತಕ್ಕದ್ದು ಎಂದು ತಿಳಿಸಲಾಗಿದೆ. ಅಂದರೆ ನಿಯಮ 5ನ್ನು ನಮೂನೆ-1 ರಲ್ಲಿನ 5ನೇ ಸೂಚನೆಯ ಜೊತೆಗೆ ಓದಿಕೊಂಡಾಗ, ದಿನಾಂಕ:31.03.2006ಕ್ಕೂ ಹಿಂದೆ ಸರ್ಕಾರಿ ಸೇವೆಗೆ ಸೇರಿದ ಸರ್ಕಾರಿ ನೌಕರರಗಳಿಂದ ಮಾಸಿಕ ವಂತಿಗೆಯು ಮಹಾಲೇಖಪಾಲರಿಂದ ಖಾತೆ ಸಂಖ್ಯೆ ಹಂಚಿಕೆಯಾದ ನಂತರ ಪ್ರಾರಂಭಗೊಳ್ಳಬೇಕಿದೆ. ಸರ್ಕಾರಿ ನೌಕರನು ನಿಯಮ 4(5)ರ ಮೇರೆಗೆ ನಿಧಿಗೆ ಸೇರಲು ಅಗತ್ಯಪಡಿಸಲಾದ ದಿನಾಂಕದಿಂದ ಚಂದಾ ಸಲ್ಲಿಸಲು ತಪ್ಪಿದಲ್ಲಿ, ಚಂದಾ ಹಣದ ಬಾಕಿಯ ಕಾರಣದಿಂದ ನಿಧಿಗೆ ಬಾಕಿ ಇರುವ ಒಟ್ಟು ಮೊತ್ತವನ್ನು ಬಡ್ಡಿ ಸಮೇತ ವಸೂಲು ಮಾಡಲು ನಿಯಮ 13(3)ರಲ್ಲಿ ಅವಕಾಶ ಕಲ್ಪಿಸಲಾಗಿದೆ. ನಿಯಮ 5 ರಡಿಯಲ್ಲಿ ಚಂದಾದಾರಗುವುದು ಕಡ್ಡಾಯಗೊಳಿಸಲಾದ ಪ್ರಕರಣಗಳಿಗೂ ನಿಯಮ 13(3) ಅನ್ವಯವಾಗುವುದೆಂದು ಪರಿಗಣಿಸಿದಲ್ಲಿ ಇಲ್ಲಿಯವರೆಗೆ ಚಂದಾದಾರರಾಗದಿರುವ ಸರ್ಕಾರಿ ನೌಕರರಿಂದ ದಿನಾಂಕ:01.06.2002 ರಿಂದ ಬಾಕಿ ಚಂದಾಗಳನ್ನು ಬಡ್ಡಿಯೊಂದಿಗೆ ವಸೂಲು ಮಾಡಬೇಕಾಗುತ್ತದೆ. ಈ ರೀತಿ ಪೂರ್ವಾನ್ವಯ ದಿನಾಂಕದಿಂದ ಚಂದಾ ಮೊತ್ತವನ್ನು ಬಡ್ಡಿ ಸಮೇತ ವಸೂಲು ಮಾಡಿದಲ್ಲಿ ಸಂಬಂಧಪಟ್ಟ ಚಂದಾದಾರನಿಗೆ ಆರ್ಥಿಕ ಹೊರೆ ಉಂಟಾಗುವುದೆಂದು ಸರ್ಕಾರ ಮನಗಂಡಿದೆ.

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳನ್ವಯ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರು ಚಂದಾದಾರರಾಗುವುದು ಕಡ್ಡಾಯಗೊಳಿಸಲಾಗಿರುವುದರಿಂದ, ಮಹಾಲೇಖಪಾಲರ ಕಛೇರಿಯಲ್ಲಿ ಸೆಪ್ಟೆಂಬರ್ 2012ರ ಅಂತ್ಯದವರೆಗೆ ಒಟ್ಟು ಸುಮಾರು 1,800 ಪ್ರಕರಣಗಳಲ್ಲಿ ಸಾಮಾನ್ಯ ಭವಿಷ್ಯ ನಿಧಿ ಖಾತೆ ಸಂಖ್ಯೆಯನ್ನು ನೀಡಲಾಗಿದ್ದರೂ ಸಹ ಈ ಪ್ರಕರಣಗಳಲ್ಲಿ ದಿನಾಂಕ: 01.06.2002ರಂದಲೇ ಚಂದಾ ಮೊತ್ತವನ್ನು ಸಂಬಂಧಪಟ್ಟ ಚಂದಾದಾರರಿಂದ ವಸೂಲು ಮಾಡಬೇಕಾಗಿರುವುದರಿಂದ ಈ ಅರ್ಜಿಗಳು ಬಾಕಿ ಉಳಿದಿದ್ದು, ಬಾಕಿ ಮೊತ್ತ ವಸೂಲಾತಿ ಬಗ್ಗೆ ಸರ್ಕಾರದ ಹಂತದಲ್ಲಿ ಸೂಕ್ತ ನಿರ್ಣಯವನ್ನು ಕೈಗೊಳ್ಳುವಂತೆ ಕೋರಿ ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಪತ್ರದಲ್ಲಿ ಮಹಾಲೇಖಪಾಲರು ಕೋರಿರುತ್ತಾರೆ.

ಮೇಲೆ ಕ್ರಸಂ. (3)ರಲ್ಲಿ ಓದಲಾದ ಸುತ್ತೋಲೆಯಲ್ಲಿ ದಿನಾಂಕ: 31.03.2006ಕ್ಕಿಂತಲೂ ಹಿಂದೆ ಸರ್ಕಾರಿ ಸೇವೆಗೆ ಸೇರಿದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಸಾಮಾನ್ಯ ಭವಿಷ್ಯ ನಿಧಿಗೆ ಚಂದಾದಾರರಾಗದಿದ್ದಲ್ಲಿ ಸೆಪ್ಟೆಂಬರ್ 2013ರೊಳಗೆ ಸಂಬಂಧಪಟ್ಟವರಿಂದ ನಿಗದಿತ ಅರ್ಜಿಯನ್ನು ಪಡೆದು ಮಹಾಲೇಖಪಾಲರಿಗೆ ಕಳುಹಿಸಿಕೊಡತಕ್ಕದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟ ಡಿಡಿಓ ಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಸಲಾಗಿದೆ.

ಮೇಲೆ ಕ್ರ.ಸಂ.(4)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ದಿನಾಂಕ: 01.04.2014ರಿಂದ ಜಾರಿಗೆ ಬರುವಂತೆ ನಿಯಮ 11ಕ್ಕೆ ತಿದ್ದುಪಡಿ ತಂದು ವಂತಿಗೆದಾರನು ಸಂದಾಯ ಮಾಡಬೇಕಾದ ಮಾಸಿದ ವಂತಿಗೆಯ ಕನಿಷ್ಠ ದರವನ್ನು ಕೋಷ್ಠಕದಲ್ಲಿ ನಿಗದಿಗೊಳಿಸಲಾಗಿದೆ. ಈ ಕೋಷ್ಠಕವನ್ನು ಆದೇಶದ ಅನುಬಂಧದಲ್ಲಿ ಇರಿಸಲಾಗಿದೆ.

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ಯಾವುದಾದರೊಂದು ನಿಯಮವನ್ನು ಜಾರಿಗೊಳಿಸುವುದರಿಂದ ಚಂದಾದಾರನಿಗೆ ಅನಗತ್ಯ ತೊಂದರೆ ಉಂಟಾಗುತ್ತದೆಂದು ಮನದಟ್ಟಾದರೆ ಸರ್ಕಾರ ಅಂತಹ ಸಂಬಂಧಪಟಟ್ಟ ನಿಯಮವನ್ನು ಸಡಿಲಿಸಲು ನಿಯಮ 31ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆದುದರಿಂದ, ದಿನಾಂಕ:31.03.2006ಕ್ಕೂ ಹಿಂದೆ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರು ಸಾಮಾನ್ಯ ಭವಿಷ್ಯ ನಿಧಿಗೆ ಸೇರ್ಪಡೆಗೊಳ್ಳಲು ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ಹಾಗೂ ಇಲ್ಲಿಯವರೆಗೆ ಚಂದಾದಾರರಾಗದಿರುವ ಸರ್ಕಾರಿ ನೌಕರರಿಂದ ಈ ಆದೇಶದ ಅನುಬಂಧದಲ್ಲಿನ ಕೋಷ್ಠಕದಂತೆ

ದಿನಾಂಕ:01.04.2014ರಿಂದ ಭವಿಷ್ಯವರ್ತಿಯಾಗಿ ನಿಯಮಾನುಸಾರ ಚಂದಾ ವಸೂಲು ಮಾಡುವುದು ಸೂಕ್ತವೆಂದು ಹಾಗೂ ಹಿಂದೆ ಚಂದಾದಾರರು ಸರಾಸರಿ ವೇತನದ ಶೇ.4ಕ್ಕಿಂತ ಕಡಿಮೆ ವಂತಿಗೆಯನ್ನು ಪಾವತಿಸಿದ್ದರೂ ಸಹ ಅದು ಸಕ್ರಮವೆಂದು ಪರಿಗಣಿಸಿ ಬಾಕಿ ವಂತಿಗೆಯನ್ನು ವಸೂಲು ಮಾಡುವ ಅವಶ್ಯಕತೆ ಇಲ್ಲವೆಂದು ಸರ್ಕಾರ ನಿರ್ಣಯಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 26 ಮುಭನಿ 2013, ಬೆಂಗಳೂರು, ದಿನಾಂಕ:06.06.2014.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಲಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 31ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ದಿನಾಂಕ: 31.03.2006ಕ್ಕೂ ಹಿಂದೆ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಅಧಿಕಾರಿ/ನೌಕರರು ಸಾಮಾನ್ಯ ಭವಿಷ್ಯ ನಿಧಿಗೆ ಸೇರ್ಪಡೆಗೊಳ್ಳಲು ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ಹಾಗೂ ಇಲ್ಲಿಯವರೆಗೆ ಚಂದಾದಾರರಾಗದಿರುವ ಸರ್ಕಾರಿ ನೌಕರರಿಂದ ಈ ಆದೇಶದ ಅನುಬಂಧದಲ್ಲಿನ ಕೋಷ್ಟಕದಂತೆ ದಿನಾಂಕ: 01.04.2014ರಿಂದ ಭವಿಷ್ಯವರ್ತಿಯಾಗಿ ನಿಯಮಾನುಸಾರ ಮಾಸಿಕ ಚಂದಾ ವಸೂಲು ಮಾಡಲು ಸರ್ಕಾರ ಆದೇಶಿಸಿದೆ.

ಈ ಹಿಂದೆ ಚಂದಾದಾರರು ಸರಾಸರಿ ವೇತನದ ಶೇ.4ಕ್ಕಿಂತ ಕಡಿಮೆ ವಂತಿಗೆಯನ್ನು ಪಾವತಿಸಿದ್ದರೂ ಸಹ ಅಂತಹ ಪ್ರಕರಣಗಳಲ್ಲಿ ದಿನಾಂಕ: 31.03.2014ರವರೆಗೆ ಬಾಕಿ ಉಳಿದಿರುವ ಕನಿಷ್ಠ ವಂತಿಗೆಯನ್ನು ವಸೂಲು ಮಾಡುವ ಅವಶ್ಯಕತೆ ಇರುವುದಿಲ್ಲ.

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ಕ್ಕೆ ಅವಶ್ಯ ತಿದ್ದುಪಡಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಲಕ್ಷಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ, (ಆಡಳಿತ ಮತ್ತು ಮುಂಗಡಗಳು)

ಅನುಬಂಧ

ಅಧಿಸೂಚನೆ ಸಂಖ್ಯೆ:ಆಇ 14 ಮುಭನಿ 2012, ದಿನಾಂಕ:23.05.2014ರನ್ವಯ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ರ ನಿಯಮ 11ರ ಉಪನಿಯಮ (1)ಕ್ಕೆ ಈ ತಿದ್ದುಪಡಿಯನ್ನು ಮಾಡಲಾಗಿದ್ದು, ದಿನಾಂಕ: 01.04.2014ರಿಂದ ಜಾರಿಗೆ ಬರುವಂತೆ ವಂತಿಗೆದಾರನು ಸಂದಾಯ ಮಾಡಬೇಕಾಗಿರುವ ಮಾಸಿಕ ವಂತಿಗೆಯ ಕನಿಷ್ಠ ದರವನ್ನು ವೇತನ ಶ್ರೇಣಿಯ ಸರಾಸರಿ ವೇತನದ ಶೇಕಡಾ ನಾಲ್ಕಕ್ಕೆ ಸಮನಾಗುವಂತೆ ನಿರ್ಧಿಷ್ಟಪಡಿಸಿ ಈ ಕೆಳಕಂಡ ಕೋಷ್ಠಕವನ್ನು ಸಿದ್ಧಪಡಿಸಲಾಗಿದೆ.

ಕೋಷ್ಟಕ

ಕ್ರಮ ಸಂಖ್ಯೆ	ವೇತನ ಶ್ರೇಣಿ	ಮಾಸಿಕ ವಂತಿಗೆಯ ಕನಿಷ್ಠ ಮೊತ್ತ (ರೂ.ಗಳಲ್ಲಿ)
1.	9600–14550	480
2.	10400–16400	540
3.	11000–19000	600
4.	11600–21000	650
5.	12500–24000	730
6.	13600–26000	790
7.	14550–26700	820
8.	16000–29600	910
9.	17650–32000	990
10.	19000–34500	1070
11.	20000–36300	1130
12.	21600–40050	1230
13.	22800–43200	1320
14.	24000–45300	1390
15.	26000–47700	1470
16.	28100–50100	1560

ಕ್ರಮ ಸಂಖ್ಯೆ	ವೇತನ ಶ್ರೇಣಿ	ಮಾಸಿಕ ವಂತಿಗೆಯ ಕನಿಷ್ಠ ಮೊತ್ತ (ರೂ.ಗಳಲ್ಲಿ)
17.	30400–51300	1630
18.	32800–52500	1710
19.	36300–53850	1800
20.	38100–55200	1870
21.	40050–56550	1930
22.	44250–60600	2100
23.	48900–63600	2250
24.	52500–73000	2510
25.	56550–79800	2730

ಎನ್.ಲಕ್ಷಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ, (ಆಡಳಿತ ಮತ್ತು ಮುಂಗಡಗಳು)

PR. 654
S.C. 100

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಸೂರ್ಯನಾರಾಯಣ, ಸಿಪಿಸಿ–819, ಪಾವಗಡ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ ಇವರ ಆದೇಶ ಸಂಖ್ಯೆ: ಸಿಬ್ಬಂದಿ(4)ಪನ್ನಿ/ಅಮಾನತ್ತು/1/2012 (ಓಬಿ ನಂ.16/2013) ದಿನಾಂಕ: 16.01.2013
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರ ಆದೇಶ ಸಂಖ್ಯೆ: ಅಪೀಲು/40/ಶಿಕ್ಷೆ/2013–14 (ಓ.ಬಿ.ಸಂಖ್ಯೆ: 82/2013–14) ದಿನಾಂಕ: 29.01.2014
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 01.03.2014
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)100/2013–14 ದಿನಾಂಕ: 09.05.2014

ಪ್ರಸ್ತಾವನೆ :

ಶ್ರೀ ಸೂರ್ಯನಾರಾಯಣ, ಸಿಪಿಸಿ–819, ಪಾವಗಡ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ಕರಟಗೆರೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ನೀವು ನಿಮ್ಮ ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಜೂಜಾಟದಂತಹ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮೇಲಾಧಿಕಾರಿಗಳಿಗೆ ಮಾಹಿತಿ ನೀಡುವಲ್ಲಿ ವಿಫಲರಾಗಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ತೋರಿರುತ್ತೀರಿ."

ಮೇಲಿನ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ, ತುಮಕೂರು ಇವರು ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ: 16.01.2013ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 6(ಆರು) ತಿಂಗಳ ಕಾಲ ಮುಂದೂಡಿ, ಇವರ ದಿನಾಂಕ: 04.01.2012ರಿಂದ 30.05.2012ರವರೆಗಿನ ಅವರ ಅಮಾನತ್ತು ಅವಧಿಯನ್ನು ಅಮಾನತ್ತು ಎಂದು ಪರಿಗಣಿಸಲಾದ ದಂಡನೆಯನ್ನು ವಿಧಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 29.01.2014ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ ಹಾಗೂ ಇವರಿಗೆ ವಿಧಿಸಿರುವ ಶಿಕ್ಷೆಯು ಆರೋಪಗಳಿಗೆ ತಕ್ಕುದಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 35 ಪೊಸಿಅ 2014 ಬೆಂಗಳೂರು, ದಿನಾಂಕ: 07.08.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸೂರ್ಯನಾರಾಯಣ, ಸಿಪಿಸಿ–819, ಪಾವಗಡ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೆಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು–ಬಿ)

PR. 655

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ.ಎ. ಸತ್ತಾರಖಾನ, ಹೆಚ್‌ಸಿ (ನಿಸ್ತಂತು), ಜಿಲ್ಲಾ ನಿಯಂತ್ರಣ ಕೋಣೆ ಗುಲ್ಬರ್ಗಾ ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರ ಆದೇಶ ದಿನಾಂಕ ಪಿಆರ್/17/ಗು/2013 (ಡಿಓಬಿ ಸಂ/1852/2013) ದಿನಾಂಕ: 19.08.2013
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ: ಅಪೀಲು/68/ಈವ/2013/799 (ಆ,ಪು.ಸಂಖ್ಯೆ: 272/ಈವ/2014) ದಿನಾಂಕ: 21.03.2014
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 09.04.2014
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)2/2013–14 ದಿನಾಂಕ: 03.6.2014

ಪ್ರಸ್ತಾವನೆ :

ಶ್ರೀ ಎಂ.ಎ. ಸತ್ತಾರಖಾನ, ಹೆಚ್‌ಸಿ (ನಿಸ್ತಂತು), (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಜಿಲ್ಲಾ ನಿಯಂತ್ರಣ ಕೋಣೆ, ಗುಲ್ಬರ್ಗಾ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತನ, ಬೇಜವಾಬ್ದಾರಿಯನ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್(ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

ದಿನಾಂಕ:05.05.2013 ರಂದು ವಿಧಾನಸಭಾ ಸಾರ್ವತ್ರಿಕ ಚುನಾವಣೆ–2013 ಇರುವುದರಿಂದ ಬೆಳ್ಳಿಗ್ಗೆ 07.00 ಘಂಟೆಗೆ ಕರ್ತವ್ಯಕ್ಕೆ ಬರಲು ಸೂಚಿಸಿದ್ದು 08.10 ಗಂಟೆಗೆ ಕರ್ತವ್ಯಕ್ಕೆ ಬಂದಿದು ಏಕೆ ತಡಮಾಡಿ ಬಂದಿರುವಿರಿ ಅಂತಾ ಕೇಳಿದಾಗ ಏರು ಧ್ವನಿಯಲ್ಲಿ "ತೇರಿ ಮಾಕಾ ಚೂತ್, ತೇರಾ ಬಹುತ ಹೋಗಯಾ: ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಮವಸ್ತ್ರದಲ್ಲಿದ್ದ ಪಿಐ ರವರ ಮೈಮೇಲೆ ಹೋಗಿದ್ದು, ಕರ್ತವ್ಯಕ್ಕೆ ವಿಳಂಬವಾಗಿ ಹಾಜರಾಗಿದ್ದು ಹಾಗೂ ಅವಾಚ್ಯ ಶಬ್ದಗಳಿಂದ ಬೈದಿದ್ದರಿಂದ ನೀವು ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತನ, ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿರುವಿರಿ."

ಮೇಲಿನ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 19.08.2013ರ ಆದೇಶದಲ್ಲಿ ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷಗಳ ಕಾಲ ಮುಂದೂಡಿ, ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾದ ದಂಡನೆಯನ್ನು ವಿಧಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 21.03.2014ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 49 ಪೊಸಿಅ 2014 ಬೆಂಗಳೂರು, ದಿನಾಂಕ: 07.08.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎ. ಸತ್ತಾರಖಾನ, ಹೆಚ್‌ಸಿ (ನಿಸ್ತಂತು), ಜಿಲ್ಲಾ ನಿಯಂತ್ರಣ ಕೋಣೆ, ಗುಲ್ಬರ್ಗಾ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೆಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು–ಬಿ)

PR. 656

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಹೆಚ್‌ಡಿ 04 ಪಿಸಿಇ 2012 ಬೆಂಗಳೂರು, ದಿನಾಂಕ: 02.08.2014.

ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 04 ಪಿಸಿಇ 2012, ದಿನಾಂಕ: 17.07.2014ರಲ್ಲಿನ ಆದೇಶ ಭಾಗದ ಮೊದಲ ಕಂಡಿಕೆಯ ಮೂರನೇ ಸಾಲಿನಲ್ಲಿ "2014–15ನೇ ಸಾಲಿಗೆ ರೂ. 20,00,000/–ಲಕ್ಷಗಳು ಎಂದಿರುವುದನ್ನು 2014–15ನೇ ಸಾಲಿಗೆ ರೂ. 13,00,000/– (ರೂಪಾಯಿ ಹದಿಮೂರು ಲಕ್ಷ ಮಾತ್ರ) ಗಳು ಎಂದು ಓದಿಕೊಳ್ಳತಕ್ಕದ್ದು, ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಕಾನೂನು ಮತ್ತು ಸುವ್ಯವಸ್ಥೆ)

PR. 657
S.C.25

ಒಳಾಡಳಿತ ಸಚಿವಾಲಯ

ವಿಷಯ : ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆಯ ಸ್ವಯಂ ಸೇವಕರು ಮತ್ತು ಸಿಬ್ಬಂದಿ ವರ್ಗದವರಿಗೆ ಮಾನ್ಯ ಮುಖ್ಯ ಮಂತ್ರಿಗಳ ಚಿನ್ನದ ಪದಕ ನೀಡಿಕೆಗಾಗಿ ಶಿಫಾರಸ್ಸುಗಳನ್ನು ತಗಲುವ ವೆಚ್ಚಕ್ಕೆ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ : ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾಸಮಾದೇಷ್ಟರ, ಗೃಹರಕ್ಷಕ ದಳ ಮತ್ತು ಪೌರರಕ್ಷಣೆ ಇಲಾಖೆ ಇವರ ಪತ್ರ ಸಂ: ಆಡಳಿತ (1) 3/ಮಾಮುಪ 2014–2015, ದಿನಾಂಕ: 19.02.2014, 05.05.2014, 17.06.2014 ಮತ್ತು 24.07.2014.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಮಹಾ ಸಮಾದೇಷ್ಟರು, ಗೃಹರಕ್ಷಕ ದಳ ಮತ್ತು ಪೌರರಕ್ಷಣಾ ಇಲಾಖೆ ಬೆಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆಯ ಸ್ವಯಂ ಸೇವಕ ಸಿಬ್ಬಂದಿಯವರಿಗೆ ಮಾನ್ಯ ಮುಖ್ಯ ಮಂತ್ರಿಗಳ ಚಿನ್ನದ ಪದಕಗಳನ್ನು ಈ ಕೆಳಕಾಣಿಸಿದ ಒಟ್ಟು 44 ಸ್ವಯಂ ಸೇವಕರು ಹಾಗೂ ಸಿಬ್ಬಂದಿಗಳ ಹೆಸರುಗಳನ್ನು ಶಿಫಾರಸ್ಸು ಮಾಡಲಾಗಿರುತ್ತದೆ.

ಕ್ರಮ ಸಂ.	ಹೆಸರು ಶ್ರೀಯುತರು/ಶ್ರೀಮತಿ	ಪದನಾಮ	ಜಿಲ್ಲೆ
1)	ಬಿ. ನಾಗ,	ಗೃಹ ರಕ್ಷಕ,	ಬೆಂಗಳೂರು ನಗರ
2)	ಎನ್. ಮಂಜುನಾಥ,	ಗೃಹ ರಕ್ಷಕ,	ಬೆಂಗಳೂರು ಗ್ರಾಮಾಂತರ
3)	ಬಿ. ವೆಂಕಟೇಶ	ಗೃಹ ರಕ್ಷಕ,	ಬೆಂಗಳೂರು ಗ್ರಾಮಾಂತರ
4)	ಎಸ್. ನಂಜುಂಡಪ್ಪ,	ಚಾಲಕ,	ಬೆಂಗಳೂರು ಗ್ರಾಮಾಂತರ
5)	ತಿಮ್ಮಪ್ಪ,	ಗೃಹ ರಕ್ಷಕ,	ಬೆಂಗಳೂರು ಕೇಂದ್ರ
6)	ವಿ.ರಾಜಣ್ಣ,	ಗೃಹ ರಕ್ಷಕ,	ಬೆಂಗಳೂರು ಕೇಂದ್ರ
7)	ಎ. ಸುಬ್ರಮಣ್ಯ,	ಗೃಹ ರಕ್ಷಕ,	ಬೆಂಗಳೂರು ಕೇಂದ್ರ
8)	ಎಸ್.ಎಂ. ಮಠಪತಿ,	ಪ್ಲಟೂನ್ ಕಮಾಂಡರ್,	ಬಾಗಲಕೋಟೆ.
9)	ಕೆ.ರಾಜಪೀರ್	ಪ್ಲಟೂನ್ ಕಮಾಂಡರ್,	ಬಳ್ಳಾರಿ.
10)	ಪಿ.ಎಂ. ಪುಟ್ಟರಾಜು,	ಕಂಪನಿ ಸಾರ್ಜಂಟ್ ಮೇಜರ್	ಚಾಮರಾಜನಗರ.
11)	ಕೆ. ಜಗನ್ನಾಥ್	ಪ್ಲಟೂನ್ ಕಮಾಂಡರ್,	ಚಿತ್ರದುರ್ಗ
12)	ಹೆಚ್.ಆರ್. ಜಯಪ್ರಕಾಶ್,	ಸೆಕೆಂಡ್–ಇನ್–ಕಮಾಂಡ್	ದಾವಣಗೆರೆ.
13)	ಹೆಚ್. ನಾರಾಯಣ,	ಪ್ಲಟೂನ್ ಕಮಾಂಡರ್,	ದಕ್ಷಿಣ ಕನ್ನಡ
14)	ರಮೇಶಸಿದ್ರಾಮಪ್ಪ ಯಚ್ಚಲಗಾರ	ಪ್ಲಟೂನ್ ಕಮಾಂಡರ್,	ಗದಗ
15)	ಅಶೋಕ ವೀರಪ್ಪ ಜಂಗಮನಿ	ಸೆಕ್ಷನ್ ಲೀಡರ್	ಗದಗ
16)	ಆರ್.ರಾಜೇಂದ್ರನ್	ಕಂಪನಿ ಕಮಾಂಡರ್	ಕೋಲಾರ

ಕ್ರಮ ಸಂ.	ಹೆಸರು ಶ್ರೀಯುತರು/ಶ್ರೀಮತಿ	ಪದನಾಮ	ಜಿಲ್ಲೆ
17)	ವೀರಣ್ಣ ಬಡಿಗೇರ್	ಸೀನಿಯರ್ ಪ್ಲಟೂನ್ ಕಮಾಂಡರ್	ಕೊಪ್ಪಳ
18)	ರಾಣೋಜಿ	ಸೀನಿಯರ್ ಪ್ಲಟೂನ್ ಕಮಾಂಡರ್	ರಾಯಚೂರು.
19)	ಹೆಚ್. ರತ್ನಮ್ಮ	ಸಹಾಯಕ ಬೋಧಕರು	ತುಮಕೂರು
20)	ಚಂದ್ರಕಾಂತ್ ದೇವಾ ನಾಯ್ಕ	ಪ್ಲಟೂನ್ ಕಮಾಂಡರ್/ಘಟಕಾಧಿಕಾರಿ	ಉತ್ತರ ಕನ್ನಡ
21)	ವಿನೋದ್ ಎನ್. ಹುಲಿಸ್ವಾರ	ಸಾರ್ಜೆಂಟ್	ಉತ್ತರ ಕನ್ನಡ./
22)	ಕುಮಾರ್	ಪ್ಲಟೂನ್ ಕಮಾಂಡರ್	ಉಡುಪಿ
23)	ಎಂ.ಬಿ. ಮುರುಗೇಶ್	ಗೃಹರಕ್ಷಕ	ಹಾಸನ
24)	ಪಿ.ಎಲ್. ಸದಾನಂದ	ಪ್ಲಟೂನ್ ಕಮಾಂಡರ್	ಶಿವಮೊಗ್ಗ
25)	ಹೆಚ್.ಆರ್. ಈರಪ್ಪ	ಪ್ಲಟೂನ್ ಕಮಾಂಡರ್	ಕೊಡಗು (ಮಡಿಕೇರಿ)
26)	ಕೆ.ಬಸವರಾಜಪ್ಪ	ಪ್ಲಟೂನ್ ಕಮಾಂಡರ್/ಘಟಕಾಧಿಕಾರಿ	ಚಿಕ್ಕಮಗಳೂರು
27)	ಆರ್.ಶೇಖರ	ವಾಹನ ಸ್ವಚ್ಚಕ	ಕೇಂದ್ರಕಚೇರಿ, ಬೆಂಗಳೂರು
28)	ಕೆ.ಎಸ್. ಉದಯಕುಮಾರ್	ಸೈನಿಕ, ತರಬೇತಿ ಅಕಾಡೆಮಿ	ಬೆಂಗಳೂರು
29)	ವಿ. ವೆಂಕಟೇಶ್	ಸೈನಿಕ, ತರಬೇತಿ ಅಕಾಡೆಮಿ	ಬೆಂಗಳೂರು
	ಬೆಂಗಳೂರು ನಗರ ಪೌರರಕ್ಷಣೆ ಸ್ವಯಂ ಸೇವಕರು		
30)	ಎನ್.ಪಿ. ನಾಗೇಂದ್ರ ಬಾಬು	ಡೆಪ್ಯೂಟಿ ಡಿವಿಜನಲ್ ವಾರ್ಡನ್ ಪೌರರಕ್ಷಣೆ,	ಬೆಂಗಳೂರು ನಗರ
31)	ಎಸ್.ಸಿ. ಬಂಡಾರಿ	ಡಿವಿಜನಲ್‌ವಾರ್ಡನ್, ಪೌರರಕ್ಷಣೆ,	ಬೆಂಗಳೂರು ನಗರ
32)	ಎಸ್. ವಿಜಯಪ್ರಸಾದ್	ಡಿವಿಜನಲ್‌ವಾರ್ಡನ್, ಪೌರರಕ್ಷಣೆ,	ಬೆಂಗಳೂರು ನಗರ
33)	ಎಂ.ಎಸ್. ರಾಜೇಶ್	ಡಿವಿಜನಲ್‌ವಾರ್ಡನ್, ಪೌರರಕ್ಷಣೆ,	ಬೆಂಗಳೂರು ನಗರ
34)	ಮಾಥ್ಯೂ ವರ್ಗೀಸ್	ಡಿವಿಜನಲ್‌ವಾರ್ಡನ್, ಪೌರರಕ್ಷಣೆ,	ಬೆಂಗಳೂರು ನಗರ
35)	ಎಸ್. ಶಶಿಕಲಾ	ಡಿವಿಜನಲ್‌ವಾರ್ಡನ್, ಪೌರರಕ್ಷಣೆ,	ಬೆಂಗಳೂರು ನಗರ
36)	ಆರ್. ಪವಿತ್ರ,	ಸೆಕ್ಟರ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
37)	ಎಸ್. ವಿನೋದ್	ಪೋಸ್ಟ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
38)	ವಿ. ಕಿರಣ್,	ಪೋಸ್ಟ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
39)	ಡಾ: ಶಾಲಿನಿ ದೇಶ್‌ಪಾಂಡೆ	ಪೋಸ್ಟ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
40)	ಈ ಮೋಹನ್	ಡೆಪ್ಯೂಟಿ ಡಿವಿಜನಲ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
41)	ಚೆರಿಲ್ ರಿಬೆಲ್ಲೊ	ಡಿವಿಜನಲ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
42)	ಎ.ಎಲ್. ಅಂತೋಣಿ	ಡೆಪ್ಯೂಟಿ ಡಿವಿಜನಲ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
43)	ಅಸೀಫ್ ಪಾಷ.ಎ.	ಡಿವಿಜನಲ್ ವಾರ್ಡನ್, ಪೌರರಕ್ಷಣೆ	ಬೆಂಗಳೂರು ನಗರ
44)	ಡಾ:ಮಹೇಶ್ ಜೋಷಿ,	ಆಫೀಸರ್ ಕಮಾಂಡಿಂಗ್ (ಕಮ್ಯುನಿಕೇಷನ್), ಪೌರರಕ್ಷಣೆ	ಬೆಂಗಳೂರು ನಗರ.

ಮೇಲ್ಕಂಡ ಚಿನ್ನದ ಪದಕ ಪುರಸ್ಕೃತರಿಗೆ ರೂ.5,000/– ನಗದು ಬಹುಮಾನವನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಈ ಸಂಬಂಧ ಪದಕ ಪ್ರಧಾನ ಸಮಾರಂಭವನ್ನು ಏರ್ಪಡಿಸಲು ತಗಲುವ ವೆಚ್ಚವು ಸೇರಿದಂತೆ ಒಟ್ಟು ವೆಚ್ಚ ರೂ. 6,24,000/– ಗಳನ್ನು 2014–15ನೇ ಸಾಲಿನ ಲೆಕ್ಕ

ಶೀರ್ಷಿಕೆ 2070–107–01–015 ಪೂರಕ ವೆಚ್ಚಗಳು ಹಾಗೂ 051–ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಭರಿಸಲು ಸರ್ಕಾರದ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ಸಮಾದೇಷ್ಟರು, ಗೃಹ ರಕ್ಷಕ ದಳ ಮತ್ತು ಪೌರರಕ್ಷಣಾ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ, ಆದುದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಒಇ 27 ಕಗೃಸೇ 2014, ಬೆಂಗಳೂರು, ದಿನಾಂಕ: 01.08.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆಯ 44 ಸ್ವಯಂ ಸೇವಕರು ಹಾಗೂ ಸಿಬ್ಬಂದಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳ ಚಿನ್ನದ ಪದಕ ನೀಡಲು ಹಾಗು ಇದಕ್ಕೆ ತಗಲುವ ಒಟ್ಟು ವೆಚ್ಚ ರೂ. 6,24,000/– (ರೂ. ಆರು ಲಕ್ಷದ ಇಪ್ಪತ್ತನಾಲ್ಕು ಸಾವಿರಗಳು) ಗಳನ್ನು ಭರಿಸಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ.

ಈ ವೆಚ್ಚವನ್ನು 2014–15ನೇ ಸಾಲಿನ ಲೆಕ್ಕ ಶೀರ್ಷಿಕೆ 2070–00–107–0–01–051– ಸಾಮಾನ್ಯ ವೆಚ್ಚಗಳ ಅಡಿ ಮತ್ತು 015–ಪೂರಕ ವೆಚ್ಚಗಳ (ಯೋಜನೇತರ) ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ: ಒಸಾಇ 37839 ಅಂಆಸ 2014, ದಿನಾಂಕ: 18.07.2014 ರಲ್ಲಿ ನೀಡಿರುವ ಸಹಮತಿ ಹಾಗು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 1 ಟಿಎಫ್‌ಪಿ 2008, ದಿನಾಂಕ: 16.05.2008 ರಲ್ಲಿ ಸರ್ಕಾರದ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ಪುಟ್ಟೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸಹಾಯಕ ಸೇವೆಗಳು)

PR. 658

ಒಳಾಡಳಿತ ಸಚಿವಾಲಯ

ವಿಷಯ : ರಾಜ್ಯದಲ್ಲಿನ 10 ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ(ವಿಶೇಷ ನ್ಯಾಯಾಲಯ)ಗಳಿಗೆ ಹೊಂದಿಕೊಂಡಂತೆ ಸರ್ಕಾರಿ ಅಭಿಯೋಜಕರುಗಳ ಹಾಗೂ ಅವರುಗಳ ಕಛೇರಿಗೆ ಪೂರಕ ಸಿಬ್ಬಂದಿಯ ಹುದ್ದೆಗಳ ಸೃಜನೆ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂ:ಲಾ 74 ಎಲ್‌ಸಿಇ 2013, ದಿನಾಂಕ:13.08.2013,
2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ:ಡಿಪಿಎನ್/ಸಿಶಾ1/210/2013–14, ದಿನಾಂಕ:12.12.2013 ಮತ್ತು 26.06.2014

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಸರ್ಕಾರದ ಆದೇಶದಲ್ಲಿ ಐಪಿಸಿ ಕಲಂ 376ರ (ಅತ್ಯಾಚಾರ) ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಚಾರಣೆ ನಡೆಸುವ ಸಲುವಾಗಿ ರಾಜ್ಯದಲ್ಲಿ 10 ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ವಿಶೇಷ ನ್ಯಾಯಲಯ)ಗಳನ್ನು ಸ್ಥಾಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿನ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ:1 ರಲ್ಲಿನ ಸರ್ಕಾರಿ ಅದೇಶದನ್ವಯ ಭಾರತ ದಂಡ ಸಂಹಿತೆ ಕಲಂ:376ರ ಅತ್ಯಾಚಾರದ ಪ್ರಕರಣಗಳನ್ನು ತೀವ್ರಗತಿಯಲ್ಲಿ ವಿಚಾರಣೆ ನಡೆಸಿ ತ್ವರಿತವಾಗಿ ನ್ಯಾಯ ವಿತರಣೆ ಮಾಡುವ ಸದುದ್ದೇಶದಿಂದ ಸ್ಥಾಪಿತವಾಗಿರುವ 10 ಹೆಚ್ಚುವರಿ ವಿಶೇಷ ನ್ಯಾಯಾಲಯ(ವಿಶೇಷ ನ್ಯಾಯಾಲಯ)ಗಳಲ್ಲಿ ಸರ್ಕಾರದ ಪರವಾಗಿ ಅಭಿಯೋಜನೆ ನಡೆಸಿ, ತ್ವರಿತವಾಗಿ ನ್ಯಾಯ ವಿತರಣೆ ಮಾಡುವ ಸಲುವಾಗಿ ಸದರಿ ವಿಶೇಷ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ 10 ಸರ್ಕಾರಿ ಅಭಿಯೋಜಕರು, 10 ಪ್ರಥಮ ದರ್ಜೆ ಸಹಾಯಕರು, 10 ಶೀಘ್ರಲಿಪಿಗಾರರು ಮತ್ತು 10 ದಲಾಯತರುಗಳ ಹುದ್ದೆಗಳನ್ನು ಅವಶ್ಯಕವಾಗಿ ಸೃಜಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 624 ಪಿಪಿಇ 2013, ಬೆಂಗಳೂರು, ದಿನಾಂಕ:05ನೇ ಆಗಸ್ಟ್ 2014.

ಪ್ರಸ್ತಾವನೆಯಲ್ಲಿನ ವಿವರದ ಹಿನ್ನೆಲೆಯಲ್ಲಿ, ಐಪಿಸಿ ಕಲಂ 376ರ (ಅತ್ಯಾಚಾರ) ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಚಾರಣೆ ನಡೆಸುವ ಸಲುವಾಗಿ ಸ್ಥಾಪಿತವಾಗಿರುವ ರಾಜ್ಯದಲ್ಲಿನ 10 ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ(ವಿಶೇಷ ನ್ಯಾಯಾಲಯ)ಗಳಿಗೆ ಹೊಂದಿಕೊಂಡಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಈ ಕೆಳಕಂಡ ಒಟ್ಟು 40 ಹುದ್ದೆಗಳನ್ನು(ಒಂದು ನ್ಯಾಯಾಲಯಕ್ಕೆ ತಲಾ 4 ಹುದ್ದೆಗಳಂತೆ) ಈ ಅದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವ ಸ್ಥಳಗಳಲ್ಲಿ ಸೃಜಿಸಿ ಆದೇಶಿಸಿದೆ.

ಕ್ರ.ಸಂ	ಸೃಜಿಸಿರುವ ಹುದ್ದೆಗಳು	ಹುದ್ದೆಗಳ ಸಂಖ್ಯೆ
1	ಸರ್ಕಾರಿ ಅಭಿಯೋಜಕರು	10
2	ಪ್ರಥಮ ದರ್ಜೆ ಸಹಾಯಕರು	10

ಕ್ರ.ಸಂ	ಸೃಜಿಸಿರುವ ಹುದ್ದೆಗಳು	ಹುದ್ದೆಗಳ ಸಂಖ್ಯೆ
3	ಶೀಘ್ರಲಿಪಿಗಾರರು	10
4	ದಲಾಯತ್	10
ಒಟ್ಟು ಹುದ್ದೆಗಳು		40

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ "2014–ನ್ಯಾಯಪರಿಪಾಲನೆ–00–114–ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು–0–02– ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು–002– ಅಧಿಕಾರಿಗಳ ವೇತನ 003–ಸಿಬ್ಬಂದಿ ವೇತನ" ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಎಫ್‌ಡಿ 395 ವೆಚ್ಚ–11/2014, ದಿನಾಂಕ:30.07.2014ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೆಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು–ಬಿ)

ಸರ್ಕಾರದ ಆದೇಶ ಸಂಖ್ಯೆ:ಒಇ 624 ಪಿಪಿಇ 2013, ಬೆಂಗಳೂರು, ದಿನಾಂಕ: 05ನೇ ಆಗಸ್ಟ್ 2014,

ಅನುಬಂಧ

ಕ್ರ. ಸಂ.	ಕಛೇರಿಯ ಹೆಸರು ಮತ್ತು ಸ್ಥಳ	ಸೃಜಿಸಿರುವ ಹುದ್ದೆಗಳು				ಒಟ್ಟು ಹುದ್ದೆಗಳು
		ಸರ್ಕಾರಿ ಅಭಿಯೋಜಕರು	ಪ್ರಥಮ ದರ್ಜೆ ಸಹಾಯಕರು	ಶೀಘ್ರಲಿಪಿಗಾರರು	ದಲಾಯತ್	
		ಹುದ್ದೆಗಳ ಸಂಖ್ಯೆ:	ಹುದ್ದೆಗಳ ಸಂಖ್ಯೆ:	ಹುದ್ದೆಗಳ ಸಂಖ್ಯೆ:	ಹುದ್ದೆಗಳ ಸಂಖ್ಯೆ:	
(1)	(2)	(3)	(4)	(5)	(6)	(7)
1	ಸರ್ಕಾರಿ ಅಭಿಯೋಜಕರ ಕಛೇರಿ, 53ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ ಜಿಲ್ಲೆ	01	01	01	01	04
2	ಸರ್ಕಾರಿ ಅಭಿಯೋಜಕರ ಕಛೇರಿ, 54ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ ಜಿಲ್ಲೆ	01	01	01	01	04
3	ಸರ್ಕಾರಿ ಅಭಿಯೋಜಕರ ಕಛೇರಿ, 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ	01	01	01	01	04
4	ಸರ್ಕಾರಿ ಅಭಿಯೋಜಕರ ಕಛೇರಿ, 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾಂ	01	01	01	01	04
5	ಸರ್ಕಾರಿ ಅಭಿಯೋಜಕರ ಕಛೇರಿ, 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಕ್ಷಿಣ ಕನ್ನಡ – ಮಂಗಳೂರು	01	01	01	01	04
6	ಸರ್ಕಾರಿ ಅಭಿಯೋಜಕರ ಕಛೇರಿ, 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗುಲ್ಬರ್ಗ	01	01	01	01	04

(1)	(2)	(3)	(4)	(5)	(6)	(7)
7	ಸರ್ಕಾರಿ ಅಭಿಯೋಜಕರ ಕಛೇರಿ, 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು–ಮಡಿಕೇರಿ	01	01	01	01	04
8	ಸರ್ಕಾರಿ ಅಭಿಯೋಜಕರ ಕಛೇರಿ, 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ	01	01	01	01	04
9	ಸರ್ಕಾರಿ ಅಭಿಯೋಜಕರ ಕಛೇರಿ, 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು	01	01	01	01	04
10	ಸರ್ಕಾರಿ ಅಭಿಯೋಜಕರ ಕಛೇರಿ, 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ	01	01	01	01	04
ಒಟ್ಟು ಹುದ್ದೆಗಳು						**40**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೆಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

PR. 659

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು (ಪ್ರಸ್ತುತ ಅಮಾನತ್ತಿನಲ್ಲಿ), ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ :
1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ ಐ.ಎನ್.ವಿ(ಜಿ)/ಸಿಟಿ/ಕ್ರೈಂ.16./2014, ದಿನಾಂಕ: 23.06.2014.
2. ತನಿಖಾಧಿಕಾರಿಯವರ ಅಂತಿಮ ತನಿಖಾ ವರದಿ, ದಿನಾಂಕ: 20.06.2014.
3. ತನಿಖಾ ದಾಖಲೆಗಳಾದ ಪ್ರಥಮ ವರ್ತಮಾನ ವರದಿ, ಟ್ರ್ಯಾಪ್ ಪಂಚನಾಮೆಗಳು ಮತ್ತು ತನಿಖಾಧಿಕಾರಿಯವರ ಅಂತಿಮ ವಸರದಿ.

ಪ್ರಸ್ತಾವನೆ :

ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಪ್ರಸ್ತುತ, ಬೆಂಗಳೂರು, ಪ್ರಸ್ತುತ ಅಮಾನತ್ತಿನಲ್ಲಿ, ಇವರ ವಿರುದ್ಧ ಪೊಲೀಸ್ ಉಪಾಧೀಕ್ಷಕರು–3, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ, ಇವರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಮೊಕದ್ದಮೆ ಸಂಖ್ಯೆ:16/2014 ರ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿನ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿನ ತನಿಖಾ ದಾಖಲಾತಿಗಳನ್ನು ಮಾನ್ಯ ಅಪರ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿನ ತಮ್ಮ ಪತ್ರ ದಿನಾಂಕ: 23.06.2014 ರೊಡನೆ ಕಳುಹಿಸುತ್ತಾ, ಆಪಾದಿತರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 19 (1)(ಬಿ)ರನ್ವಯ ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಅಪರ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಪರಿಶೀಲಿಸಿದೆ:

1. ಸಾಕ್ಷಿದಾರರ ಸಾಕ್ಷ್ಯತ್ವದ ವಿವರಣಾ ಪಟ್ಟಿ.
2. ದಾಖಲಾತಿಗಳ ಸಾಕ್ಷ್ಯತ್ವದ ವಿವರಣಾ ಪಟ್ಟಿ.
3. ಪ್ರಕರಣದ ತನಿಖಾಧಿಕಾರಿಯವರು ದಿನಾಂಕ: 20.06.2014ರಂದು ಸಲ್ಲಿಸಿದ ಅಂತಿಮ ತನಿಖಾ ವರದಿ.
4. ಪ್ರಥಮ ವರ್ತಮಾನ ವರದಿ ಮತ್ತು ದಿನಾಂಕ: 25.04.2014ರಂದು ಫಿರ್ಯಾದುದಾರರು ನೀಡಿರುವ ದೂರು.

5. ದಿನಾಂಕ: 25.04.2014ರಂದು ನಡೆಸಿದ ಪ್ರಾಯೋಗಿಕ ಪಂಚನಾಮೆ.
6. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ದಾಖಲು ಮಾಡಿರುವ ನೋಟುಗಳ ನಂಬರ್ ವಿವರ (ಪಂಚರು ಮತ್ತು ತನಿಖಾಧಿಕಾರಿಯವರ ಸಹಿ ಇರುತ್ತದೆ) ಮತ್ತು ಘನ ನ್ಯಾಯಾಲಯಕ್ಕೆ ನೋಟಿನ ಕ್ರಮ ಸಂಖ್ಯೆಗಳ ಬಗ್ಗೆ ಸಲ್ಲಿಸಿದ ತಿದ್ದುಪಡಿ ವರದಿ ದಿನಾಂಕ: 12.05.2014.
7. ಫಿರ್ಯಾದಿ ದೂರು ನೀಡುವ ಸಮಯದಲ್ಲಿ ಹಾಜರುಪಡಿಸಿದ ಸಿ.ಡಿ.ಯಲ್ಲಿದ್ದ ಸಂಭಾಷಣೆಯ ಲಿಪೀಕರಣದ ವಿವರ.
8. ದಿನಾಂಕ: 25.04.2014ರಂದು ನಡೆಸಿದ ಟ್ರ್ಯಾಪ್ ಪಂಚನಾಮೆ.
9. ಟ್ರ್ಯಾಪ್ ಸಮಯದಲ್ಲಿ ಆರೋಪಿತರು ಮತ್ತು ಫಿರ್ಯಾದುದಾರರ ನಡುವೆ ನಡೆದಿರುವ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಆಗಿರುವ ಸಂಭಾಷಣೆಯ ಲಿಪೀಕರಣ.
10. ದಿನಾಂಕ: 25.04.2014ರಂದು ತನಿಖಾಧಿಕಾರಿಯವರು ತಯಾರಿಸಿದ ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆ.
11. ಕಾರ್ಯದರ್ಶಿಯವರ ಕಛೇರಿ, ಬಿ.ಡಿ.ಎ. ಕೇಂದ್ರ ಕಛೇರಿ, ಬೆಂಗಳೂರು, ಈ ಕಛೇರಿಯಿಂದ ಸಂಗ್ರಹಿಸಿದ ದಾಖಲಾತಿಗಳು.
12. ದಿನಾಂಕ: 25.04.2014ರಂದು ಪಡೆದ ಆರೋಪಿತೆ–1 ರವರ ಪ್ರತಿರಕ್ಷಣಾ ವರದಿ.
13. ದಿನಾಂಕ: 25.04.2014ರಂದು ಪಡೆದ ಆರೋಪಿತ–2 ರವರ ಪ್ರತಿರಕ್ಷಣಾ ವರದಿ.
14. ಆರೋಪಿತರ ಮೇಲಾಧಿಕಾರಿಯಾದ ಶ್ರೀ ಶ್ಯಾಮಭಟ್, ಆಯುಕ್ತರು, ಬಿ.ಡಿ.ಎ. ಕೇಂದ್ರ ಕಛೇರಿ, ಬೆಂಗಳೂರು, ಇವರು ಸಿ.ಡಿ. ಗಳಲ್ಲಿರುವ ಆರೋಪಿತರ ಧ್ವನಿಯನ್ನು ಗುರುತಿಸಿದ ಬಗ್ಗೆ ನೀಡಿರುವ ವರದಿ.
15. ಮಾಲು ಪಟ್ಟಿ 26/2014, ದಿನಾಂಕ: 25.04.2014.
16. ಈ ಕೇಸಿನಲ್ಲಿ ಅಮಾನತ್ತುಪಡಿಸಿದ್ದ ಆರ್ಟಿಕಲ್‌ಗಳನ್ನು ಸೀಲು ಮಾಡಲು ಉಪಯೋಗಿಸಿದ್ದ "ಎಕ್ಸ್‌ವೈ" ಎಂಬ ಇಂಗ್ಲೀಷ್ ಆಕ್ಷರದ ಸೀಲನ್ನು ಪಡೆದ ಬಗ್ಗೆ ಪಂಚರಾದ ಶ್ರೀ ಶ್ರೀನಿವಾಸ್‌ರವರಿಂದ ಪಡೆದ ಸೀಲು ಸ್ವೀಕೃತಿ ಪತ್ರ.
17. ಸಂಖ್ಯೆ: ಬಿ.ಡಿ.ಎ./ಕಮೀಷನರ್/ಡಿಎಸ್‌ಐ/ಇಎಸ್‌ಟಿ/809/14–15, ದಿನಾಂಕ: 20.06.2014ರಲ್ಲಿ ಆಯುಕ್ತರು, ಬಿ.ಡಿ.ಎ. ಕೇಂದ್ರ ಕಛೇರಿ, ಬೆಂಗಳೂರು, ರವರು ಆರೋಪಿತರ ಕರ್ತವ್ಯದ ವಿವರಗಳ ಬಗ್ಗೆ ನೀಡಿರುವ ವರದಿ.
18. ಸೀನಿಯರ್ ಅಕೌಂಟ್ಸ್ ಆಫೀಸರ್, ಪ್ರಿನ್ಸಿಪಲ್ ಅಕೌಂಟ್ಸ್ ಜನರಲ್ (ಎ&ಇ), ಬೆಂಗಳೂರು, ರವರ ಪತ್ರ ಸಂಖ್ಯೆ: ಜಿಇ 1/ಆರ್2/ವಿಓಎಲ್.726/458, ದಿನಾಂಕ: 19.06.2014ರಲ್ಲಿ ನೀಡಿರುವ ಆರೋಪಿತರ ಸೇವಾ ವಿವರ ಮತ್ತು ವೇತನದ ವಿವರಗಳು.
19. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ:4, ಕಟ್ಟಡಗಳ ಉಪ ವಿಭಾಗ, ಎಸ್‌ಜೆಪಿ ಕಾಲೇಜ್ ಆವರಣ, ಬೆಂಗಳೂರು, ರವರ ಕಛೇರಿ ಪತ್ರ ಸಂಖ್ಯೆ: ಸಕಾಅ/ಕಉವಿ–4/ಕೃತ್ಯ ನಡೆದ ಸ್ಥಳದ ನಕಾಶೆ/2014–15/148, ದಿನಾಂಕ: 22.05.2014ರ ಕೃತ್ಯ ನಡೆದ ಸ್ಥಳದ ನಕ್ಷೆ.
20. ರಾಸಾಯನಿಕ ತಜ್ಞರ ವರದಿ ಸಂಖ್ಯೆ: ಸಾ.ಆ.ಸಂ/ರಾ.ಪ/ಲೋಕ್/15/14–15, ದಿನಾಂಕ:12.05.2014.
21. ಸಾಕ್ಷಿದಾರರುಗಳ ಹೇಳಿಕೆಗಳು: ಶ್ರೀ ಎನ್. ಬಸವರಾಜು (ಫಿರ್ಯಾದಿ), ಶ್ರೀ ಶ್ರೀನಿವಾಸ್, ಶ್ರೀಮತಿ ಜಿ.ಪ್ರಮೀಳಾ, ಶ್ರೀ ನಾಗೇಂದ್ರ, ಶ್ರೀಮತಿ ಪಾರ್ವತಮ್ಮ, ಶ್ರೀ ಆರ್. ಕೃಷ್ಣಪ್ಪ, ಶ್ರೀ ಮಾದಯ್ಯ, ಶ್ರೀ ಸುಬ್ಬರಾವ್, ಶ್ರೀ ಲಿಂಗಯ್ಯ, ಶ್ರೀ ನಾಗರಾಜ, ಶ್ರೀ ಶಿವಲಿಂಗೇಗೌಡ, ಶ್ರೀಮತಿ ರಾಜೇಶ್ವರಿ, ಶ್ರೀ ಬಿ.ಕೃಷ್ಣಮೂರ್ತಿ, ಶ್ರೀ ಸತೀಶ್, ಪೊಲೀಸ್ ಕಾನ್ಸ್‌ಟೇಬಲ್, ಸಶ್ರೀ ಎನ್.ಚಂದ್ರಶೇಖರ್, ಪೊಲೀಸ್ ಕಾನ್ಸ್‌ಟೇಬಲ್, ಶ್ರೀ ಪಿ.ರವೀಂದ್ರ, ಪೊಲೀಸ್ ಕಾನ್ಸ್‌ಟೇಬಲ್, ಶ್ರೀಮತಿ ಕುಸುಮ, ಮ.ಪಿ.ಸಿ., ಶ್ರೀಮತಿ ಎನ್.ಮಮತ, ಮ.ಪಿ.ಸಿ.,ಶ್ರೀಮತಿ ವನಜಾಕ್ಷಿ, ಮ.ಪಿ.ಸಿ., ಸಿ.ವೆಂಕಟೇಶ್, ಪೊಲೀಸ್ ಕಾನ್ಸ್‌ಟೇಬಲ್, ಶ್ರೀ ನಂಜುಂಡ, ಪೊಲೀಸ್ ಕಾನ್ಸ್‌ಟೇಬಲ್, ಶ್ರೀ ಡಿ.ಪ್ರಕಾಶ್, ಪೊಲೀಸ್ ಕಾನ್ಸ್‌ಟೇಬಲ್, ಶ್ರೀ ಮಹಮದ್ ಮುಕಾರಾಮ್, ಪೊಲೀಸ್ ಇನ್ಸಪೆಕ್ಟರ್, ಶ್ರೀ ಎನ್.ಜಿ.ಶಿವಶಂಕರ್, ಪೊಲೀಸ್ ಇನ್ಸ್‌ಪೆಕ್ಟರ್, ಶ್ರೀ ಟಿ.ವಿ.ರಾಜು, ಪೊಲೀಸ್ ಇನ್ಸ್‌ಪೆಕ್ಟರ್, ಶ್ರೀ ಸುಧೀರ್, ಪೊಲೀಸ್ ಇನ್ಸ್‌ಪೆಕ್ಟರ್, ಶ್ರೀ ಬಿ.ಜಿ.ಕುಮಾರ ಸ್ವಾಮಿ, ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಶ್ರೀ ವಿ.ಪಿ.ಎಂ.ಸ್ವಾಮಿ ಪೊಲೀಸ್ ಉಪಾಧೀಕ್ಷಕರು.

ತನಿಖಾಧಿಕಾರಿಗಳಾದ ಶ್ರೀ ಎಂ. ನಾರಾಯಣ, ಪೊಲೀಸ್ ಉಪಾಧೀಕ್ಷಕರು–3, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಪ್ರಸ್ತುತ ಅಮಾನತ್ತಿನಲ್ಲಿ, ಇವರ ವಿರುದ್ಧ ಶಿಕ್ಷಾರ್ಹ ಪ್ರಕರಣವನ್ನು ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನೆ ಸಂಖ್ಯೆ: 16/2014ರಲ್ಲಿ ಲಂಚ ನಿರೋಧಕ ಕಾಯ್ದೆ 1988ರಡಿ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಪ್ರಸ್ತುತ ಅಮಾನತ್ತಿನಲ್ಲಿ, ಇವರು ಫಿರ್ಯಾದುದಾರರಾದ ಶ್ರೀ ಎನ್. ಬಸವರಾಜು ರವರಿಗೆ ಪರಿಚಯವಿರುವ ಶ್ರೀ ನಾಗೇಂದ್ರ ರವರಿಗೆ ಸೇರಿದ ವಳಗೇರಹಳ್ಳಿ ಗ್ರಾಮದ ಸರ್ವೆ ನಂ.24/13ರಲ್ಲಿ ಭೂಸ್ವಾಧೀನವಿಲ್ಲದ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸುಮಾರು 4 1/2 ಗುಂಟೆ ಜಮೀನು 2002 ನೇ ಸಾಲಿನಲ್ಲಿ ಉಪಯೋಗಿಸಿಕೊಂಡಿದ್ದು, ಇದುವರೆಗೆ ಯಾವುದೇ ರೀತಿಯ ಪರಿಹಾರ ನೀಡದೇ ಇದ್ದುದರಿಂದ ಹಾಗೂ ಮತ್ತೊಂದು ಕಡತದಲ್ಲಿ ಶ್ರೀಮತಿ ಪಾರ್ವತಮ್ಮ ಎಂಬುವವರಿಗೆ ಸೇರಿದ ಉಲ್ಲಾಳು ಗ್ರಾಮದ ಸರ್ವೆ ನಂ: 163/6, 118/1 ರಲ್ಲಿ ಸುಮಾರು 0.25 ಗುಂಟೆ ಜಮೀನನ್ನು ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣಕ್ಕಾಗಿ ಸುಮಾರು 2000–2002ರಲ್ಲಿ ಭೂಸ್ವಾಧೀನ ಪಡಿಸಿದ್ದು, ಇವರಿಗೆ ಪ್ರೋತ್ಸಾಹದಾಯಕ ಯೋಜನೆಯನ್ವಯ 30X40 ಅಡಿ ನಿವೇಶನ ನೀಡಬೇಕಾಗಿದ್ದು, ಈ ಬಗ್ಗೆ ಇವರಿಬ್ಬರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಸುಮಾರು

ಭಾರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಗೆ ಸುತ್ತಾಡಿದರೂ ಪ್ರಯೋಜನವಾಗದ ಕಾರಣ, ಶ್ರೀ ನಾಗೇಂದ್ರ ಮತ್ತು ಶ್ರೀಮತಿ ಪಾರ್ವತಮ್ಮ ಇವರುಗಳು ಪಿರ್ಯಾದುದಾರರಾದ ಶ್ರೀ ಎನ್. ಬಸವರಾಜುರವರನ್ನು ತಮ್ಮ ಕೆಲಸವನ್ನು ಮಾಡಿಸಿಕೊಡುವಂತೆ ಕೋರಿ, ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಈ ವಿಷಯದ ಬಗ್ಗೆ ಪಿರ್ಯಾದುದಾರರಾದ ಶ್ರೀ ಎನ್. ಬಸವರಾಜು ರವರು ಆರೋಪಿತ ಅಧಿಕಾರಿಯವರಾದ ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಇವರನ್ನು ಭೇಟಿ ಮಾಡಿದಾಗ, ಆರೋಪಿತ ಅಧಿಕಾರಿಯವರು ಶ್ರೀ ನಾಗೇಂದ್ರ ರವರ ಕಡತಕ್ಕೆ ಮೊದಲಿಗೆ ರೂ. 10.00 ಲಕ್ಷಗಳನ್ನು ಕೇಳಿದ್ದು, ಕೊನೆಗೆ ರೂ. 8.00 ಲಕ್ಷಗಳನ್ನು ಕೇಳಿ ನಂತರ ರೂ. 6.00 ಲಕ್ಷಗಳ ಲಂಚವನ್ನು ನೀಡುವಂತೆ ಹಾಗೂ ಶ್ರೀಮತಿ ಪಾರ್ವತಮ್ಮ ಇವರ ಕಡತಕ್ಕೆ ರೂ. 1.00 ಲಕ್ಷಗಳನ್ನು ಒಟ್ಟಾಗಿ ಎರಡು ಕಡತಗಳಿಗೆ ಸೇರಿ ಒಟ್ಟು ರೂ. 7.00 ಲಕ್ಷಗಳ ಲಂಚವನ್ನು ನೀಡಬೇಕೆಂದು ಒತ್ತಾಯಿಸಿರುತ್ತಾರೆ. ಈ ಸಂಬಂಧ ಪಿರ್ಯಾದುದಾರರಾದ ಶ್ರೀ ಎನ್. ಬಸವರಾಜು ರವರು ದಿನಾಂಕ: 25.04.2014ರಂದು ಲೋಕಾಯುಕ್ತದಲ್ಲಿ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರನ್ನು ಸ್ವೀಕರಿಸಿದ ತನಿಖಾಧಿಕಾಗಳು ಆರೋಪಿತ ಅಧಿಕಾರಿಯವರನ್ನು ಟ್ರ್ಯಾಪ್ ಮಾಡಲು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿರುತ್ತಾರೆ. ನಂತರ ಆರೋಪಿತ ಅಧಿಕಾರಿಯಾದ ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಇವರು ದಿನಾಂಕ:25.04.2014ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪಿರ್ಯಾದುದಾರರಿಂದ ಲಂಚದ ಹಣ ರೂ. 7.00 ಲಕ್ಷಗಳನ್ನು ಪಡೆಯುವಾಗ ಲೋಕಾಯುಕ್ತ ಪೊಲೀಸರು ಬೀಸಿದ ಬಲೆಗೆ ಸಿಕ್ಕಿಬಿದ್ದಿರುತ್ತಾರೆ. ಸರ್ಕಾರಿ ಕೆಲಸಕ್ಕಾಗಿ ಲಂಚದ ಹಣಕ್ಕೆ ಬೇಡಿಕೆ ಮತ್ತು ಸದರಿ ಲಂಚದ ಹಣವನ್ನು ಸ್ವೀಕರಿಸಿರುವುದಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರ ಟ್ರ್ಯಾಪ್‌ಗೆ ಒಳಗಾಗಿದ್ದ ಕಾರಣ, ಲೋಕಾಯುಕ್ತ ಪೊಲೀಸರು, ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಇವರನ್ನು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೊಳಪಡಿಸಿರುತ್ತಾರೆ.

ಆರೋಪಿತರ ಅಧಿಕಾರಿಯಾದ ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಇವರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಬಣ್ಣ ರಹಿತವಾದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದರಿಂದ ಹಾಗೂ ಆರೋಪಿತ ಅಧಿಕಾರಿಯವರು ಕುಳಿತಿದ್ದ ಟೇಬಲ್‌ನ ಡ್ರಾಯರ್‌ನಲ್ಲಿ ಲಂಚದ ಹಣವನ್ನು ಇರಿಸಿದ ಫೈಲ್‌ನ ಮೇಲ್ಭಾಗವನ್ನು ಹತ್ತಿಯಿಂದ ಒರೆಸಿದಾಗ ಅದರಲ್ಲಿ ಫಿನಾಪ್ತಲೀನ್ ಅಂಶ ಇದ್ದ ಬಗ್ಗೆ ದೃಢಪಟ್ಟಿರುತ್ತದೆ ಎಂದು ರಾಸಾಯನಿಕ ತಜ್ಞರು ನೀಡಿರುವ ವರದಿಯು ಆರೋಪಿತರು ಲಂಚದ ಹಣವನ್ನು ಸ್ವೀಕರಿಸಿರುವುದನ್ನು ದೃಢಪಡಿಸುತ್ತದೆ. ಪ್ರಕರಣದಲ್ಲಿನ ಧ್ವನಿ ಪರೀಕ್ಷಾ ತಜ್ಞರು ನೀಡಿರುವ ವರದಿಯನ್ವಯ ಆರೋಪಿತರು ಪಿರ್ಯಾದಿಯಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಹಾಗೂ ಅದನ್ನು ಪಡೆದಿರುವುದು ದೃಢಪಡಿಸುತ್ತದೆ. ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳು ದಾಖಲಿಸಿಕೊಂಡಿರುವ ಪಿರ್ಯಾದಿಯ ಹೇಳಿಕೆ, ಮಹಜರ್, ಸಾಕ್ಷಿದಾರರ ಹೇಳಿಕೆಗಳು, ಲೋಕಾಯುಕ್ತ ಅಧಿಕಾರಿ ಮತ್ತು ಸಿಬ್ಬಂದಿಗಳ ಹೇಳಿಕೆಗಳು ಹಾಗೂ ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿರುವ ದಾಖಲಾತಿಗಳು ಆರೋಪಿತ ಅಧಿಕಾರಿಯಾದ ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಇವರ ಮೇಲಿನ ಆಪಾದನೆಗಳು ಮೇಲ್ನೋಟಕ್ಕೆ ದಾಖಲೆಗಳಿಂದ ದೃಢಪಟ್ಟಿರುತ್ತದೆ.

ಮೇಲಿನ ಕಾರಣಗಳಿಂದಾಗಿ, ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಪ್ರಸ್ತುತ ಅಮಾನತ್ತಿನಲ್ಲಿ, ಇವರು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2)ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಮನವರಿಕೆಯಾಗಿದೆ. ಆದ್ದರಿಂದ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2) ರನ್ವಯ ಸದರಿ ಆರೋಪಿತ ಅಧಿಕಾರಿಯನ್ನು ಅಭಿಯೋಜನೆಗೆ ಒಳಪಡಿಸುವುದು ಅವಶ್ಯವೆಂದು ಸರ್ಕಾರವು ಮನಗಂಡಿದೆ.

ಆದ್ದರಿಂದ, ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ)ರನ್ವಯ ಆಪಾದಿತ ಅಧಿಕಾರಿ ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಪ್ರಸ್ತುತ ಅಮಾನತ್ತಿನಲ್ಲಿ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2)ರಡಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡಲು ಉದ್ದೇಶಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 69 ಕೆಇವಿ 2014, ಬೆಂಗಳೂರು, ದಿನಾಂಕ: 10.07.2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಪಿತ ಅಧಿಕಾರಿಯಾದ ಶ್ರೀಮತಿ ರಾಜಮ್ಮ ಎ. ಚೌಡರೆಡ್ಡಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಪ್ರಸ್ತುತ ಅಮಾನತ್ತಿನಲ್ಲಿ, ಇವರ ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2)ರಡಿಯಲ್ಲಿ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಕಲಂ 19(1)(ಬಿ)ರನ್ವಯ ಅಭಿಯೋಜನೆಗೆ ಒಳಪಡಿಸಲು ಕರ್ನಾಟಕ ಲೋಕಾಯುಕ್ತಕ್ಕೆ ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ)ನಿಯಮಾವಳಿ, 1977 ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ:10.07.2014ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ॥ ಬಗಾದಿ ಗೌತಮ್

ಸರ್ಕಾರದ ಉಪ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು).

PR. 627

SC-25

ಕೃಷಿ ಸಚಿವಾಲಯ

ವಿಷಯ: ಕೃಷಿ ಬೆಲೆ ಆಯೋಗ ರಚನೆ ಕುರಿತು

ಓದಲಾಗಿದೆ: (1) ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ ದಿನಾಂಕ:12–07–2013

(2) ಕೃಷಿ ನಿರ್ದೇಶನಾಲಯದ ಏಕ ಕಡತ ಸಂಖ್ಯೆ: ಉಕೃನಿ/ಕೃನಿ/ಕೃಬೆಆ/2013–14, ದಿನಾಂಕ: 02–07–2013.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ ದಿನಾಂಕ: 12–07–2013ರ ಕಂಡಿಕೆ –50 ರಲ್ಲಿ " ರೈತರು ತಮ್ಮ ಉತ್ಪನ್ನಗಳಿಗೆ ಸಿಗುವ ಅನಿಶ್ಚಿತ ಬೆಳೆಗಳಿಂದಾಗಿ ಯಾವಾಗಲೂ ಸಂಕಷ್ಟಕ್ಕೆ ಈಡಾಗುತ್ತಾರೆ. ಇದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಕೃಷಿಗೆ ತೊಡಗಿಸಿದ ಉತ್ಪಾದನಾ ವೆಚ್ಚವು ಅವರಿಗೆ ದಕ್ಕುವುದಿಲ್ಲ. ಆದ್ದರಿಂದ, ಸೂಕ್ತ ಬೆಲೆ ನಿಗಧಿಗೊಳಿಸಲು ಕೃಷಿ ಬೆಲೆ ಆಯೋಗವನ್ನು ರಚಿಸಲಾಗುವುದು. ಈ ಆಯೋಗವು ರೈತರು, ಕೃಷಿ ತಜ್ಞರು ಮತ್ತು ಕೃಷಿ ಹಾಗೂ ಆರ್ಥಿಕ ತಜ್ಞರನ್ನು ಒಳಗೊಂಡಿರುತ್ತದೆ. ಆಯೋಗವು ವೈಜ್ಞಾನಿಕವಾಗಿ ಮಾಡುವ ಶಿಫಾರಸ್ಸುಗಳನ್ನು ಆಧರಿಸಿ ಸರ್ಕಾರವು ಸೂಕ್ತ ಬೆಲೆಯನ್ನು ನಿಗಧಿಪಡಿಸಲಿದೆ" ಎಂದು ಪ್ರಸ್ತಾಪಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಏಕ ಕಡತದಲ್ಲಿ ಕೃಷಿ ಆಯುಕ್ತರು ಕೃಷಿ ಉತ್ಪನ್ನ ಬೆಲೆ ಆಯೋಗ ರಚಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಬಗ್ಗೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಕೃಷಿ ವಿಷಯದಲ್ಲಿ ಪರಿಣಿತರಾದ ಕೃಷಿ ವಿಶ್ವವಿದ್ಯಾಲಯದ ತಜ್ಞರು, ಕೃಷಿ ಮಾರುಕಟ್ಟೆ ತಜ್ಞರು, ಕೃಷಿ ಆರ್ಥಿಕ ತಜ್ಞರು, ಪ್ರಗತಿಪರ ರೈತರು, ಎ ಪಿ ಎಂ ಸಿ ಅಧ್ಯಕ್ಷರು ಹಾಗೂ ಹಿರಿಯ ಅಧಿಕಾರಿಗಳನ್ನೊಳಗೊಂಡ ವಿಶೇಷ ಕಾರ್ಯಗಾರವನ್ನು ನಡೆಸಿ ಹಿಂದಿನ ವರ್ಷಗಳಲ್ಲಿ (2001–2007) ಇದ್ದಂತಹ ಆಯೋಗದ ರೂಪುರೇಷೆ, ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಕರ್ತವ್ಯ ಮತ್ತು ಕಾರ್ಯವ್ಯಾಪ್ತಿ, ಈಗಿರುವ ಕೃಷಿ ಮಾರುಕಟ್ಟೆ ವಸ್ತುಸ್ಥಿತಿ ಹಾಗೂ ಇತರೆ ವಿಷಯಗಳನ್ನಾಧರಿಸಿ ಚರ್ಚಿಸಿ ವಿವಿಧ ತಜ್ಞರು ನೀಡಿದ ಸಲಹೆಗಳನ್ನು ಪರಿಗಣಿಸಿ ಹಲವು ಸಭೆಗಳನ್ನು ನಡೆಸಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲೂ ಸಹ ವಿಶೇಷ ಸಭೆ ನಡೆಸಿ ಅಭಿಪ್ರಾಯಗಳನ್ನು ಪರಿಗಣಿಸಿ ಸಚಿವ ಸಂಪುಟದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸಚಿವ ಸಂಪುಟವು, ಕೃಷಿ ಬೆಲೆ ಆಯೋಗ ರಚನೆಗೆ ಸಂಬಂಧಿಸಿದಂತೆ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ದಿನಾಂಕ: 16–11–2013 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿರುತ್ತದೆ.

ಅದರಂತೆ ಸಚಿವ ಸಂಪುಟದ ಉಪ ಸಮಿತಿ ಅಧ್ಯಕ್ಷರಾದ ಸನ್ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರ ಅಧ್ಯಕ್ಷತೆಯಲ್ಲಿ ಒಂದೆರಡು ಸಭೆಗಳನ್ನು ನಡೆಸಿ ಅಂತಿಮವಾಗಿ ದಿನಾಂಕ: 07–01–2014ರಂದು ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿದೆ.

ಕೃಷಿ ಬೆಲೆ ಆಯೋಗದ ದೃಷ್ಟಿಕೋನ:

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಠ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸಲು, ಆಹಾರ ಭದ್ರತಾ ಅಗತ್ಯಗಳನ್ನು ಪೂರೈಸುವ ಉದ್ದೇಶ, ಕೃಷಿ ಉತ್ಪನ್ನಗಳಿಗೆ ಪ್ರತಿಫಲ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

ಧ್ಯೇಯ:

ಕೃಷಿ ಉತ್ಪನ್ನಗಳಿಗೆ ಪ್ರತಿಫಲ ಬೆಲೆ ಒದಗಿಸುವುದು, ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಹೆಚ್ಚಿನ ಉತ್ಪಾದನೆ ಸಮಯದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ, ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ (collective bargaining power) ಮತ್ತು ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ–ವ್ಯಾಪಾರ ICT ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ/ ಪ್ರದೇಶಗಳಿಗೆ ಲಾಭ ತಲುಪುವುದು ಮುಖ್ಯ ಉದ್ದೇಶವಾಗಿರುತ್ತದೆ.

ಈ ಆಯೋಗಕ್ಕೆ ಸಂಬಂಧಪಟ್ಟ ನಿಬಂಧನೆಗಳು, ಕರ್ತವ್ಯಗಳು ಮತ್ತು ರಚನೆ ಅನುಬಂಧ–1,2 ಮತ್ತು 3 ರಂತಿದೆ. ಸರ್ಕಾರವು ಶಿಫಾರಸ್ಸುಗಳನ್ನು ಪರಿಗಣಿಸಿದೆ. ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2013, ಬೆಂಗಳೂರು, ದಿನಾಂಕ: 31–01–2014.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಅಧ್ಯಕ್ಷರು ಹಾಗೂ ಐದು ಸದಸ್ಯರನ್ನೊಳಗೊಂಡ ಕೃಷಿ ಬೆಲೆ ಆಯೋಗವನ್ನು ಅನುಬಂಧ–1, 2 ಮತ್ತು 3 ರಲ್ಲಿನ ನಿಬಂಧನೆ, ಕರ್ತವ್ಯ ಮತ್ತು ರಚನೆಯಂತೆ ರಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಮಂಜುನಾಥ ಪಾಟೀಲ್

ಸರ್ಕಾರದ ಅಧೀನ ಕಾರ್ಯದರ್ಶಿ,

ಕೃಷಿ ಇಲಾಖೆ (ಯೋಜನೆ)

ಅನುಬಂಧ–1

ಆದೇಶ ಸಂಖ್ಯೆ: ಕೃಇ/61/ಕೃಉಇ/2013. ದಿನಾಂಕ: 31–1–2014

ಷರತ್ತು ಮತ್ತು ನಿಬಂಧನೆಗಳು (Terms of Reference)

1. ಬೆಳೆ ಉತ್ಪಾದನಾ ವೆಚ್ಚ, ಮಾರುಕಟ್ಟೆಯ ಕರ್ತವ್ಯಗಳು, ಅಲ್ಪಾವಧಿ ಹಾಗೂ ದೀರ್ಘಾವಧಿಯ ಕೃಷಿ ಪರಿಸರ ಸ್ಥಿತಿಗಳನ್ವಯ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಮತೋಲನಾ ಮತ್ತು ಸಮಗ್ರ ರೀತಿಯಲ್ಲಿ ಲಾಭದಾಯಕ ಬೆಲೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
2. ಸುವ್ಯವಸ್ಥಿತ, ಸಮರ್ಥ ಮತ್ತು ಸ್ಪರ್ಧಾತ್ಮಕ ಮಾರುಕಟ್ಟೆ ವ್ಯವಸ್ಥೆ, ಒಕ್ಕಣೆ ಕಣ, ದಾಸ್ತಾನು ಮಳಿಗೆಗಳು, ಸಾರಿಗೆ, ಪೂರೈಕೆ ಸರಪಳಿ (supply chain), ಸಂಸ್ಕರಣೆ, ವರ್ಗೀಕರಣ (Grading) ಮತ್ತು ಪ್ಯಾಕೇಜಿಂಗ್ ಸೇರಿದಂತೆ, ಗ್ರಾಮೀಣ ಮೂಲ ಸೌಕರ್ಯ ಸೃಷ್ಠಿ ಮಾಡಲು ನೀತಿ/ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸರ್ಕಾರಕ್ಕೆ ನೆರವಾಗುವುದು.

3. ರೈತರು ಸಾಮೂಹಿಕವಾಗಿ ಲಾಭದ ಬೆಲೆ ಪಡೆದುಕೊಳ್ಳುವ ಶಕ್ತಿಯನ್ನು ವರ್ಧಿಸಲು ಮತ್ತು ಮಾರುಕಟ್ಟೆ ಬೆಲೆ ಸ್ಥಿರೀಕರಣ ನಿಧಿ, ಸಾಮೂಹಿಕ ಕ್ರಮಗಳ ಮೂಲಕ ಬೆಲೆಯಲ್ಲಿ ಸಂಭವನೀಯ ಹಾನಿಯನ್ನು ಕಡಿಮೆ ಮಾಡಲು ಸಲಹೆ ನೀಡುವುದು.
4. ಮಳೆ ಆಧಾರಿತ ಬೇಸಾಯ, ಪೌಷ್ಟಿಕತೆ, ಹವಾಮಾನ ಬದಲಾವಣೆ, ಸಂಪನ್ಮೂಲಗಳ ಸದ್ಬಳಕೆ, ಸಮರ್ಥನೀಯ ಬೆಲೆ ಮೂಲಕ ಸುಸ್ಥಿರ ಕೃಷಿ ಮತ್ತು ಆಹಾರ ಭದ್ರತೆಗಾಗಿ ಪರಿಣಾಮಕಾರಿಯಾದ ಕ್ರಮಗಳನ್ನು ರೂಪಿಸುವುದು.
5. ಉತ್ಪಾದನೆ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಸಂಬಂಧಪಟ್ಟ ಎಲ್ಲಾ ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸುವ ಮೂಲಕ ರೈತರು, ನೀತಿ ರೂಪಿಸುವವರು ಹಾಗೂ ಸಂಶೋಧಕರಿಗೆ ಸೂಕ್ತ ನಿರ್ಣಯ ಕೈಗೊಳ್ಳಲು ಅನುವು ಮಾಡಿಕೊಡುವುದು.
6. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಸೂಕ್ತ ಬೆಲೆ ನಿಗಧಿಪಡಿಸಲು ಸರಿಯಾದ ವಿಧಾನ ರೂಪಿಸಲು ಮತ್ತು ವಿವಿಧ ಪಾಲುದಾರರೊಡನೆ ಸಮಾಲೋಚಿಸಿ ಪರಿಣಾಮಕಾರಿ ವೆಚ್ಚ ಮತ್ತು ದಕ್ಷ ಕ್ರಮಗಳನ್ನು ರೂಪಿಸುವುದು.
7. ಪ್ರಸ್ತುತ ಮಾರುಕಟ್ಟೆ ಸ್ಥಿತಿ ಪರಿಶೀಲಿಸಿ ಮಾರುಕಟ್ಟೆಯ ಮೂಲ ಸೌಕರ್ಯಗಳನ್ನು ಸುಧಾರಿಸಲು ಮತ್ತು ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಪ್ರಸಕ್ತ ಇಳುವರಿ ಹಾಗು ಗರಿಷ್ಟ ಇಳುವರಿಯ ಅಂತರವನ್ನು ಕಡಿಮೆ ಮಾಡಲು ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಸಲಹೆ ನೀಡುವುದು.
8. ಅಧಿಕ ಉತ್ಪಾದನೆ ಮತ್ತು ಮಾರುಕಟ್ಟೆಗೆ ಹೆಚ್ಚಿನ ಉತ್ಪನ್ನಗಳ ಪೂರೈಕೆ ತಡೆಗಟ್ಟಲು, ಸಂಪನ್ಮೂಲಗಳ ಸುಸ್ಥಿರ ಬಳಕೆ, ಸಾಮಾಜಿಕ, ಆರ್ಥಿಕ ಮತ್ತು ಬೇಸಾಯದ ಜೈವಿಕ ಅಂಶಗಳನ್ನು ಆಧಾರಿಸಿ ಕೃಷಿ ಹವಾಮಾನ ವಲಯಗಳಲ್ಲಿ ಪ್ರಾದೇಶಿಕ ಬೆಳೆ ಯೋಜನೆ ರೂಪಿಸುವ ಬಗ್ಗೆ ಸಲಹೆ ನೀಡುವುದು.
9. ಮಾರುಕಟ್ಟೆಗೆ ಸಂಬಂಧಿಸಿದ ತೊಂದರೆಗಳು ಮತ್ತು ಕೃಷಿ ಉತ್ಪನ್ನಗಳ ದರಗಳ ಬಗ್ಗೆ ಆಯೋಗಕ್ಕೆ ಉಲ್ಲೇಖಿಸುವ ಅಂಶಗಳಿಗೆ ಕಾಲಕಾಲಕ್ಕೆ ಸರ್ಕಾರಕ್ಕೆ ಸಲಹೆ ನೀಡುವುದು.
10. ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ ಮತ್ತು ರಾಜ್ಯ ಸರ್ಕಾರದ ಮಧ್ಯ ಸಂಪರ್ಕ ಸೇತುವೆಯಾಗಿ, ರಾಜ್ಯದ ವಿವಿಧ ಇಲಾಖೆ/ಸಂಸ್ಥೆಗಳಲ್ಲಿ ಸಮನ್ವಯಗೊಳಿಸಿ ವಿವಿಧ ಇಲಾಖೆಗಳ ಉತ್ಪಾದನಾ ಕಾರ್ಯಕ್ರಮಗಳಲ್ಲಿ ಸಾಮರಸ್ಯ ಉಂಟು ಮಾಡಿ ಕೃಷಿ ಉತ್ಪನ್ನಗಳ ಮಾರುಕಟ್ಟೆ ಮತ್ತು ಮಾರುಕಟ್ಟೆ ಬೆಲೆಯನ್ನು ರೈತರ ಕಲ್ಯಾಣಕ್ಕಾಗಿ ನಿಗಧಿಪಡಿಸುವುದು.

ಅನುಬಂಧ–2

ಆದೇಶ ಸಂಖ್ಯೆ: ಕೃಇ/61/ಕೃಉಇ/2013. ದಿನಾಂಕ: 31–1–2014

ಕರ್ತವ್ಯಗಳು (Duties)

1. ನಿಯಮಿತವಾಗಿ ಮತ್ತು ವ್ಯವಸ್ಥಿತವಾಗಿ ಸ್ಥಳೀಯ ಬೇಡಿಕೆ, ಪರಿಕರಗಳ ಸರಬರಾಜು, ಹುಟ್ಟುವಳಿ ಪ್ರತಿಬಿಂಬಿಸುವ ಪ್ರಾಮಾಣಿತ ಬೆಲೆ ಪರಿಕಲ್ಪನೆಗಳನ್ನು ಬಳಸಿಕೊಂಡು ತೋಟಗಾರಿಕಾ ಬೆಳೆಗಳು ಸೇರಿದಂತೆ ರಾಜ್ಯದ ಪ್ರಮುಖ ಕೃಷಿ ಬೆಳೆಗಳ ಸಾಗುವಳಿ ವೆಚ್ಚ ಅಂದಾಜಿಸುವುದು.
2. ನಿಯತಕಾಲಿಕವಾಗಿ ರಾಜ್ಯ ಸರ್ಕಾರದಿಂದ ಮಧ್ಯಸ್ಥಿಕೆ ವಹಿಸಬೇಕಾಗಿರುವ ಬೆಳೆಗಳನ್ನು ಗುರುತಿಸುವುದು. ಪ್ರಾರಂಭಿಕವಾಗಿ ರಾಗಿ, ಜೋಳ, ಸಜ್ಜೆ, ಕಿರುಧಾನ್ಯಗಳು, ತೊಗರಿ, ನೆಲಗಡಲೆ, ಆಲೂಗಡ್ಡೆ, ಟೊಮೆಟೊ ಮತ್ತು ಈರುಳ್ಳಿ ಬೆಳೆಗಳನ್ನು ಪರಿಗಣಿಸುವುದು. ಇತರೆ ಬೆಳೆಗಳನ್ನು ಸೇರ್ಪಡೆ ಮಾಡುವುದರ ಬಗ್ಗೆ ಸಮಿತಿಯು ಕಾಲಕಾಲಕ್ಕೆ ಸರ್ಕಾರವು ಗುರುತಿಸಿ ಸೂಚಿಸಿದಂತೆ ಕ್ರಮ ಕೈಗೊಳ್ಳುವುದು.
3. ಕೃಷಿ ಉತ್ಪನ್ನಗಳಿಗೆ ಸಂಭವನೀಯ ಬೆಲೆ ನೀಡಲು, ಬೆಳೆಗಳ ಉತ್ಪಾದಕತೆ, ಉತ್ಪಾದನೆ, ಆವರಿಸಿದ ವಿಸ್ತೀರ್ಣ ಮತ್ತು ಮುಂಗಡ ಬೆಲೆ, ಸರಬರಾಜು ಮತ್ತು ಬೇಡಿಕೆ ಬಗ್ಗೆ ವಿಶ್ಲೇಷಣೆ ಮಾಡುವುದು.
4. ರೈತರ ಮತ್ತು ಗ್ರಾಹಕರ ಹಿತಾಸಕ್ತಿಯನ್ನು ಗಮನಿಸಿ ಪ್ರಮುಖ ಕೃಷಿ ಉತ್ಪನ್ನಗಳ ಲಾಭದಾಯಕ ಬೆಲೆಗಳನ್ನು ಕನಿಷ್ಟ ಬಿತ್ತನೆಗೆ 2 ತಿಂಗಳ ಮುಂಚೆ ಶಿಫಾರಸ್ಸು ಮಾಡುವುದು.
5. ಕೃಷಿ ಮತ್ತು ತೋಟಗಾರಿಕೆ ಪದಾರ್ಥಗಳ ವೆಚ್ಚಗಳು, ಬೆಲೆ ಮತ್ತು ಮಾರುಕಟ್ಟೆ, ವ್ಯಾಪಾರ ಇತ್ಯಾದಿ ಅಂಶಗಳ ಗುಣಮಟ್ಟ ಮತ್ತು ವಿಶ್ವಾಸಾರ್ಹವಾದ ಸಂಶೋಧನೆ ಬಗ್ಗೆ ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಮಾಡುವುದು.
6. ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಪಟ್ಟಂತೆ, ಉತ್ಪಾದನೆ, ಮಾರುಕಟ್ಟೆ, ಬೆಲೆ ಹಾಗೂ ವ್ಯಾಪಾರದ ಬಗ್ಗೆ ಅಧ್ಯಯನ, ವರದಿಗಳನ್ನು ಪ್ರಕಟಿಸುವುದು ಮತ್ತು ಬೆಲೆ ಏರಿಳಿತ, ಮಾರುಕಟ್ಟೆಯ ಅಪಾಯಗಳು, ಹೆಚ್ಚಿನ ವೆಚ್ಚಗಳು ಮತ್ತು ಇತರ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು, ಸಂಶೋಧಕರು, ತಜ್ಞರು, ಮಾರುಕಟ್ಟೆ ವೃತ್ತಿಪರರು ಮತ್ತು ಸಲಹೆಗಾರರನ್ನು ತೊಡಗಿಸಿಕೊಂಡು ಕಾರ್ಯಗಾರ/ವಿಚಾರ ಸಂಕೀರ್ಣ, ಸಮಾಲೋಚನೆಗಳನ್ನು ಏರ್ಪಡಿಸುವುದು.
7. ಪ್ರಾಯೋಗಿಕ ಯೋಜನೆಯ ಆಧಾರದ ಮೇರೆಗೆ ಸಾಮೂಹಿಕ ಮತ್ತು ಗುಂಪು ಮಾರಾಟಗಾರಿಕೆ ಉಪಕ್ರಮಗಳು, ಮಧ್ಯವರ್ತಿಗಳಿಂದ ಉಂಟಾಗುವ ಶೋಷಣೆಯನ್ನು ತಪ್ಪಿಸುವುದು ಮತ್ತು ಆಹಾರ ಭದ್ರತೆ ಧ್ಯೇಯಗಳನ್ನು ಗಮನದಲ್ಲಿರಿಸಿಕೊಂಡು ಆಹಾರ ಧಾನ್ಯಗಳ ಉತ್ಪಾದಕತೆಯನ್ನು ಹೆಚ್ಚಿಸಲು ಪೂರಕ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.
8. ಆಧುನಿಕ ಮಾರುಕಟ್ಟೆ, ವಿದ್ಯುನ್ಮಾನ ವ್ಯಾಪಾರ, ಭವಿಷ್ಯದ ಮಾರುಕಟ್ಟೆ, ವಾಣಿಜ್ಯ ಬೆಳೆಗಳ ಆಧುನಿಕ ವ್ಯಾಪಾರೋದ್ಯಮದ ಪ್ರಯೋಜನೆಗಳನ್ನು ಪಡೆಯಲು ವಿಶೇಷ ಸರಕು ಮಾರುಕಟ್ಟೆಗಳ ಬಗ್ಗೆ ಸಲಹೆ ನೀಡುವುದು.
9. ರೈತರಿಗೆ ಮಾಹಿತಿ ಒದಗಿಸಲು ಮತ್ತು ಬೆಳೆ ಉತ್ಪಾದನೆ, ಮಾರುಕಟ್ಟೆ ಮತ್ತು ಸ್ಥಳೀಯ ಕಾಲೋಚಿತ ಮಾಹಿತಿ ಆಧರಿಸಿ ವಿವಿಧ ಮಾರುಕಟ್ಟೆಗಳಲ್ಲಿ ಬೆಲೆಗಳ ಬಗ್ಗೆ ರೈತರಿಗೆ ಮಾಹಿತಿಗಾಗಿ ನಿಯಮಿತವಾಗಿ ಪೋರ್ಟಲ್ ನವೀಕರಣಕ್ಕಾಗಿ ಒಂದು ವಿಶೇಷ ತಾಂತ್ರಿಕ ಕೋಶ ರೂಪಿಸಲು ಕೃಷಿ ಪೋರ್ಟಲ್ ಅಭಿವೃದ್ಧಿ ಪಡಿಸುವುದು.
10. ಮಾರುಕಟ್ಟೆಯಲ್ಲಿ ಬೆಲೆಯನ್ನು ಅಧ್ಯಯನ ಮಾಡಿ ಮಾರುಕಟ್ಟೆ ಬೆಲೆ ಏರುಪೇರಾದಾಗ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬುದನ್ನು ಆಯೋಗವು ಸಲಹೆ ನೀಡುವುದು.

ಅನುಬಂಧ–3

ಆದೇಶ ಸಂಖ್ಯೆ: ಕೃಇ/61/ಕೃಉಇ/2013. ದಿನಾಂಕ: 31–1–2014

ರಚನೆ (Structure)

1. ಅತ್ಯುತ್ತಮ ಶೈಕ್ಷಣಿಕ ಹಿನ್ನೆಲೆ ಮತ್ತು ಕೃಷಿ ಮಾರುಕಟ್ಟೆ ಸೇರಿದಂತೆ ಕೃಷಿ ಅರ್ಥಶಾಸ್ತ್ರದಲ್ಲಿ ಪರಿಣಿತಿ ಹೊಂದಿರುವ ಕೃಷಿ ತಜ್ಞರವರ ಅಧ್ಯಕ್ಷತೆಯ ನೇತೃತ್ವದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗ ಕಾರ್ಯ ನಿರ್ವಹಿಸುವುದು.
2. ಅಧ್ಯಕ್ಷರಿಗೆ ಸಹಕಾರಿಯಾಗಿ ಐದು ಸದಸ್ಯರಿರುವುದು, ಇದರಲ್ಲಿ ಸರ್ಕಾರದಿಂದ ಒಬ್ಬ ಸದಸ್ಯ, ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವರು.
3. ಐದು ಸದಸ್ಯರುಗಳಲ್ಲಿ ಕೃಷಿ ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಕೃಷಿ ಮಾರಾಟ/ಕೃಷಿ ನಿರ್ವಹಣೆ ಇತ್ಯಾದಿ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಇಬ್ಬರು ಅಧಿಕಾರಿ ಸದಸ್ಯರು.
4. ಇಬ್ಬರು ಅಧಿಕಾರೇತರ ಸದಸ್ಯರು – ಪ್ರಗತಿಪರ ದೃಷ್ಟಿಕೋನವನ್ನು ಹೊಂದಿರುವ ರೈತರು ಮತ್ತು ಕೃಷಿ ಉತ್ಪನ್ನಗಳ ಮಾರಾಟದ ಬಗ್ಗೆ ಅನುಭವ ಹೊಂದಿರುವವರು.
5. ಸಮಿತಿ ಕೆಲಸ ನಿರ್ವಹಿಸಲು ಇತರೆ ಸಿಬ್ಬಂದಿ ಮತ್ತು ತಾಂತ್ರಿಕ ಸಿಬ್ಬಂದಿಯನ್ನು ರಾಜ್ಯ ಸರ್ಕಾರದ ಇಲಾಖೆಗಳು/ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ ನಿಯೋಜನೆ ಮೇರೆಗೆ/ಇತರೆ ಸಿಬ್ಬಂದಿಯನ್ನು ಕರಾರಿನ ಆಧಾರದ ಮೇರೆಗೆ ಪಡೆಯುವುದು.
6. ಕೃಷಿ ಬೆಲೆ, ಮಾರುಕಟ್ಟೆ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ತಜ್ಞರು/ವೃತ್ತಿಪರರನ್ನು ನಿಯೋಜನೆ/ಒಪ್ಪಂದ/ ಹೊರಗುತ್ತಿಗೆ ಆಧಾರದ ಮೇರೆಗೆ ಪಡೆಯುವುದು.
7. ಕರ್ನಾಟಕ ಕೃಷಿ ಬೆಲೆ ಆಯೋಗದ ಪ್ರಸ್ತಾವಿತ ಅವಧಿ ಮೂರು ವರ್ಷಗಳು

ಮಂಜುನಾಥ ಪಾಟೀಲ್

ಸರ್ಕಾರದ ಅಧೀನ ಕಾರ್ಯದರ್ಶಿ,

ಕೃಷಿ ಇಲಾಖೆ (ಯೋಜನೆ)

AGRICULTURE SECRETARIAT

Sub: Formation of Agriculture Price Commission

Read: 1. Budget Speech of Hon'ble Chief Minister of Karnataka dated 12-07-2013 .

2. Directorate of Agriculture Single file No:ಉಕೃನಿ//ಕೃನಿ/ಕೃಬೆಆ/2013–14, ದಿನಾಂಕ: 02/07/2014

Preamble:

Hon'ble Chief Minister of Karnataka in the budget speech para 50 has proposed as read at (1) above dated 12-07-2013 stating that "Farmers are always facing problems due to indeterminate prices for their produce. Most of the times they do not even get, the costs incurred. Hence to fix suitable prices "Agriculture Price Commission" will be constituted. This commission will consist of farmers, Agriculture experts and Agro-economist. Government will fix suitable prices based on the scientifically worked in to recommendations of the Commission"

Commissioner for Agriculture in the file read at (2) above has furnished the proposal for approval of formation of Agriculture Price Commission.

In this background, a special workshop was organized under the chairmanship of Hon'ble Agriculture Minister inviting the scientists from State Agriculture Universities, agriculture marketing experts, agriculture economists, progressive farmers, APMC chairmen and senior officers of the Government. In this workshop, plan of action of previous commission (2001-2007), Terms and References of the Commission for Agricultural Costs and Prices of the Central Government, present status of agriculture market and other related subjects were discussed. Further a special meeting was also convened under the chairmanship of the Hon'ble Chief Minister for discussions about the subject. The proposal was placed before the Cabinet for approval. The Cabinet Sub Committee was formed on 16-11-2013 to examine and recommend for formation of Agriculture Price Commission.

Accordingly the Hon'ble Minister for Law, Justice and human rights, Parliamentary affairs and legislation, Animal Husbandry who is the Chairman of the Cabinet Sub Committee convened two meetings. In final meeting held on 07/01/2014 after detailed discussion, it recommended the following:-

VISION OF AGRICULTURE PRICE COMMISSION:

The vision of price commission is to ensure maximum share of consumer price, achieve sustainable Agriculture Development in the field of Agriculture of the State, provide remunerative price of farm produce and to provide suitable marketing system etc.

MISSION:

To provide remunerative price for the farm produce, improving the basic facilities for market, stabilization of market through price and non price mechanisms, critical marketing interventions during the period of glut, marketing reforms and

collective bargaining for getting profitable price for the farmers. To enhance collective bargaining power of farmers and reach all the sections of farming community through effective accomplishment of market reforms, crop insurance, E-trading.

Terms of Reference, Duties and Structure is as appended in annexure 1,2 & 3.

Government Order No.AGD/61/AMS/2013, Bangalore Dt: 31-01-2014

Considering all the points of the above proposal, Agriculture price commission is constituted with chairman and 5 members as per the Terms of references, Duties, Structure as appended in annexure 1,2 &3.

By Order and in the name of Governor of Karnataka

MANJUNATH PATIL

Under Secretary to Government,

Agriculture Department (Planning).

ANNEXURE-1

Govt Order No: AGD/61 /AMS/2013, Dt: 31-1-2014.

Terms of References

1. Advice the Government to evolve a balanced and integrated price structure on scientific basis for agriculture and horticultural commodities considering inter alia the cost of cultivation, marketing functions, agro-ecological conditions both in the short term and long run.
2. To assist the Government in providing policies / programs towards well-organized, efficient and competitive marketing system, creation of rural infrastructure including threshing yard, storage structures, transportation, supply chain, processing, grading and packaging services.
3. To suggest measures to enhance bargaining power of farmers and reduce the price risks through collective action in marketing, price stabilization fund and hedging.
4. To provide measures towards food security with cost effective and sustainable ways considering rain fed farming, nutrition, climate change and sustainable use of resources.
5. Enable the policy makers, researchers, farmers for appropriate decision making by providing reliable data and information on all aspects of production and marketing of farm produces .
6. To devise proper methodology for fixing remunerative prices for agriculture & horticultural commodities and suggest cost effective and efficient measures of implementing the same, in consultation with various stakeholders.
7. To review the current marketing set up and suggest measures to improve efficiency in marketing and reducing the yield gaps of agricultural and horticultural commodities.
8. Suggest regional crop planning for agro-climatic zones based on socio-economic and agro-biological factors with sustainable use of resources to avoid overproduction and glut in the market.
9. To advice on any problems relating to marketing and pricing of farm products that may be referred to the Commission by Government from time to time.
10. To act as a liaison between the CACP and the State Govt, and as an agent to co-ordinate the functioning of various governmental departments and institutions and to harmonize the programs of production, marketing and pricing of farm produces for the welfare of farmers of Karnataka.

Annexure-2

Govt Order No: AGD/61 /AMS/2013, Dt: 31-1-2014.

DUTIES

1. Estimation of cost of cultivation of principal crops of the state including horticultural crops regularly and systematically using standard cost concepts reflecting the local conditions of demand, supply of inputs and outputs.
2. Identify periodically, crops for which State Government has to undertake Market Intervention Program with an initial focus on Ragi, Jowar, Bajra, Minor Millets, Redgram, Groundnut Potato, Onion and Tomato.
3. Analysis of production, area coverage, productivity of crops and providing price projections including supply, demand towards remunerative prices for farm produces.
4. To recommend Fair & Remunerative Price (FRP) for major crops/commodities to be made at least two months before sowing season ensuring the interest of both producer and consumer.
5. To generate, analyse, and disseminate quality and reliable data, information and research output on costs, price and other aspects of production, marketing and trading of agricultural and horticultural commodities.
6. To initiate studies, publish reports / papers and undertake workshops, seminars, consultations on production, marketing, pricing, trade and related issues of agriculture and horticulture by engaging researchers, experts, marketing professionals and consultants to address price fluctuations, marketing risks, high costs and other related issues.

7. Explore, on pilot project basis, collective farming and group marketing initiatives to avoid superfluous market intermediaries and to formulate supplementary actions to increase food production to achieve food security goals and to realize programs of the State such as "Anna Bhagya" and Mid day meal scheme.
8. Suggest specialised commodity markets to reap the benefit of modern marketing such as electronic trading, future markets, hedging for high value, commercial crops.
9. Develop an Agriculture Portal to provide information to farmers and formulate a Special Technical Cell to update the information on the portal on regular basis for information to farmers on crops production, marketing and prices for different markets based on the local seasonal and crop conditions.
10. To study the market situation and to suggest the action to be taken by the Government whenever there is fluctuation in the price of agriculture/horticulture commodities in the market.

ANNEXURE-3

Govt Order No: AGD/61 /AMS/2013, Dt: 31-1-2014.

STRUCTURE

1. The APC will be headed by a Chairperson with excellent academic background and reputation of being renowned Agricultural Experts with specialization in Agricultural Economics including Agricultural Marketing.

2. The Chairman shall be assisted by five Members: one member from the Government shall function as Member Secretary.

3. Two Official Members with the specialization in the fields of Agriculture Economics,/Agricultural marketing / Farm Management / related disciplines.

4. Two non-official members - Practicing Farmers with a progressive outlook and practical knowledge of marketing of farm products.

5. Supporting Staff**:** Staff and Technical Personnel can be drawn from the Government Departments/Agricultural/ Horticultural Universities of the State on deputation / others on contractual basi**s.**

6. Experts / professionals in the fields of Agriculture Price, Marketing and trading can be drawn on deputation / contractual / outsourcing bases.

7. The term of the APC would be for three years**.**

MANJUNATH PATIL
Under Secretary to Government,
Agriculture Department (Planning).

PR. 427
SC. 100

ಕಂದಾಯ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಕಂಇ 07 ಭೂಸ್ವಾರಾ 2014, ಬೆಂಗಳೂರು,ದಿನಾಂಕ:05-03-2014.

ವಿಷಯ: ಭಾರತ ಸರ್ಕಾರವು "The Right to Fair Compensation and Transparency in Land Acquisition, Rehabilitation and Resettlement Act-2013" ನ್ನು ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ ಈ ಹಿಂದೆ ಭೂಸ್ವಾಧೀನ ಕಾಯ್ದೆ 1894 ರಡಿಯಲ್ಲಿ ಪ್ರಾರಂಭಗೊಂಡಿರುವ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣ ಗೊಳಿಸುವ ಕುರಿತು ಮಾರ್ಗಸೂಚಿಗಳು.

ಭಾರತ ಸರ್ಕಾರವು "The Right to Fair Compensation and Transparency in Land Acquisition, Rehabilitation and Resettlement Act-2013" ನ್ನು ದಿನಾಂಕ 01-01-2014 ರಂದು ಜಾರಿಗೆ ತಂದಿರುತ್ತದೆ. ಇದರನ್ವಯ ದಿನಾಂಕ 01-01-2014 ರಿಂದ ಸಾರ್ವಜನಿಕ ಮತ್ತು ಇತರೆ ಉದ್ದೇಶಗಳಿಗೆ ಕೈಗೊಳ್ಳುವ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಗಳಿಗೆ ಹೊಸ ಕಾಯ್ದೆಯನ್ನು ಅನುಸರಿಸಬೇಕಾಗಿರುತ್ತದೆ.

ಹೊಸ ಕಾಯ್ದೆಯು ಜಾರಿಗೆ ಬಂದಿರುವುದರಿಂದ ಈ ಹಿಂದಿನ ಭೂಸ್ವಾಧೀನ ಕಾಯ್ದೆ 1894 ನಿರಶನಗೊಂಡಿರುತ್ತದೆ. ಆದಾಗ್ಯೂ, ಈ ಹಿಂದೆ ಜಾರಿಯಲ್ಲಿದ್ದ ಭೂಸ್ವಾಧೀನ ಕಾಯ್ದೆ 1894 ರನ್ವಯ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡಿದ್ದು, ವಿವಿಧ ಹಂತದಲ್ಲಿರುವ ಭೂಸ್ವಾಧೀನ ಪ್ರಕ್ರಿಯೆಗಳನ್ನು ಹಳೆಯ ಕಾಯ್ದೆಯ ಅನ್ವಯವೇ ಮುಂದುವರಿಸುವ ಅಥವಾ ಹೊಸ ಕಾಯ್ದೆಯನ್ನು ಅನ್ವಯಿಸುವ ಕುರಿತಂತೆ ಹೊಸ ಕಾಯ್ದೆ 2013ರ ಕಲಂ-24, 103 ಮತ್ತು 114 ಹಾಗೂ The General Clauses Act 1897ರ ಸೆಕ್ಷನ್-6 ರನ್ವಯ ಪರಿಶೀಲಿಸಿ ಮುಂದುವರಿಯಲು ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಭೂಸ್ವಾಧೀನ ಕಾಯ್ದೆ 1894 ರನ್ವಯ ದಿನಾಂಕ 31-12-2013 ರವರೆಗೆ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಾರಂಭಗೊಂಡಿದ್ದು, ಹಾಲಿ ವಿವಿಧ ಹಂತದಲ್ಲಿರುವ ಪ್ರಕ್ರಿಯೆಗಳನ್ನು ಮುಂದುವರಿಸಿ ಪೂರ್ಣಗೊಳಿಸುವ ಕುರಿತು ಈ ಕೆಳಕಂಡಂತೆ ಆಡಳಿತಾತ್ಮಕ ಮಾರ್ಗಸೂಚಿಗಳನ್ನು ನಿಗಧಿಪಡಿಸಲಾಗಿದೆ.

1) ಕಲಂ-4(1) ಅಧಿಸೂಚನೆ ಹೊರಡಿಸಿದ್ದು ಹಾಗೂ ಕಲಂ-5(ಎ) ವಿಚಾರಣೆ ಪೂರ್ಣಗೊಳಿಸಿದ ಮತ್ತು ವಿಚಾರಣೆ ಹಂತದಲ್ಲಿರುವ ಪ್ರಕರಣಗಳಿಗೆ ವಿಚಾರಣೆ ಪೂರ್ಣಗೊಳಿಸಿ, ಕಲಂ-6(1-ಎ)ರನ್ವಯ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ಅನುಮತಿ ನೀಡಬೇಕಾದ ಪ್ರಕರಣಗಳಲ್ಲಿ ಈ ಹಿಂದಿನ ಕಾಯ್ದೆ ಅನ್ವಯವೇ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸುವುದು ಹಾಗೂ ಕಲಂ-6(1)ರ ಅಂತಿಮ ಘೋಷಣೆಯನ್ನು ಸಹ ಈ ಹಿಂದಿನ ಕಾಯ್ದೆಯನ್ವಯವೇ ಹೊರಡಿಸಬಹುದು.

2) ಕಲಂ–4(1)ರ ಅಧಿಸೂಚನೆ ಹೊರಡಿಸಿದ್ದು ಹಾಗೂ ಕಲಂ–6(1–ಎ)ರನ್ವಯ ಪ್ರಕ್ರಿಯೆ ಮುಗಿದಿದ್ದು, ಜಂಟಿ ಮೋಜಿಣಿ ನಂತರ ಕಲಂ–6(1)ರನ್ವಯ ಅಂತಿಮ ಘೋಷಣೆ ಹೊರಡಿಸಬೇಕಾದ ಪ್ರಕರಣಗಳಲ್ಲಿ ಈ ಹಿಂದಿನ ಕಾಯ್ದೆಯನ್ವಯವೇ ಅಂತಿಮ ಘೋಷಣೆ ಹೊರಡಿಸುವುದು.

3) ಮೇಲಿನ ಕ್ರಮ ಸಂಖ್ಯೆ: 1 ಮತ್ತು 2ರ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯ್ದೆ 1894ರನ್ವಯ ಕಲಂ–6(1)ರ ಅಂತಿಮ ಘೋಷಣೆ ಹೊರಡಿಸಿದ ನಂತರ ಐತೀರ್ಪು ಅನುಮೋದನೆ ಮಾಡಬೇಕಾದ ಸಂದರ್ಭದಲ್ಲಿ ಹೊಸ ಕಾಯ್ದೆಯ ಕಲಂ–24(1–ಎ)ರನ್ವಯ ಹೊಸ ಕಾಯ್ದೆಯನ್ವಯವೇ ಪರಿಹಾರ ನಿಗಧಿಪಡಿಸಿ ಐತೀರ್ಪು ಅನುಮೋದಿಸಲು ಕ್ರಮ ಕೈಗೊಳ್ಳುವುದು.

4) ಭೂಸ್ವಾಧೀನ ಕಾಯ್ದೆ 1894ರ ಕಲಂ–17ರನ್ವಯ ತುರ್ತುವಿಧಿ ಬಳಸಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ನೀಡಲಾಗಿದ್ದು, ದಿನಾಂಕ 31–12–2013 ರವರೆಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಳ್ಳದೇ ಇರುವ ಪ್ರಕರಣಗಳಲ್ಲಿ ಇಂತಹ ಅನುಮತಿಯನ್ನು ರದ್ದುಗೊಳಿಸಲಾಗಿದೆಯೆಂದು ಭಾವಿಸುವುದು. ಹೊಸ ಕಾಯ್ದೆಯನ್ವಯ ಸೆಕ್ಷನ್–40 ರಲ್ಲಿ ಹೇಳಿರುವ ಸೀಮಿತ ಪ್ರಕರಣಗಳಲ್ಲಿ ಮಾತ್ರ ತುರ್ತುವಿಧಿಯನ್ವಯ ಜಮೀನು ಸುಪರ್ದು ಪಡೆಯಲು ಕ್ರಮ ಕೈಗೊಳ್ಳುವುದು.

5) ಈ ಪ್ರಕ್ರಿಯೆಗಳನ್ನು 1894ರ ಭೂಸ್ವಾಧೀನ ಕಾಯ್ದೆಯನ್ವಯ ಮುಂದುವರಿಸಿರುವುದರಿಂದ ಇದನ್ನು ದಿನಾಂಕ 31–12–2013 ರೊಳಗೆ ಪ್ರಾರಂಭಗೊಂಡ ಪ್ರಕರಣಗಳಿಗೆ ಮಾತ್ರ ಅನ್ವಯಿಸುವುದು. ತದನಂತರ, ಭಾರತ ಸರ್ಕಾರದ ಹೊಸ ಭೂಸ್ವಾಧೀನ ಕಾಯ್ದೆ ಅನ್ವಯವೇ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

ಇದಲ್ಲದೆ ಈ ಹಿಂದಿನ ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಅಂದರೆ, ಐತೀರ್ಪು ಅನುಮೋದನೆ ಆಗಿ ಪೂರ್ಣಗೊಂಡಿದ್ದರೂ ಸಹ ಹೊಸ ಕಾಯ್ದೆ ಜಾರಿಗೆ ಬಂದ ನಂತರ ಕಲಂ–24(1)(ಬಿ)ರಲ್ಲಿ ತಿಳಿಸಿರುವಂತೆ ಈ ಕೆಳಕಂಡ ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪುನರ್ ಪರಿಶೀಲಿಸತಕ್ಕದ್ದು;

(ಅ)ಹೊಸ ಕಾಯ್ದೆ ಜಾರಿಗೆ ಬರುವ ಮುಂಚೆ 5 ವರ್ಷ ಅಥವಾ ಅದಕ್ಕೂ ಹಿಂದಿನ ವರ್ಷಗಳಲ್ಲಿ ಭೂಸ್ವಾಧೀನ ಕಾಯ್ದೆ 1894 ಕಲಂ–11ರನ್ವಯ ಐತೀರ್ಪು ಅನುಮೋದನೆಯಾಗಿದ್ದರೂ ಸಹ ಜಮೀನನ್ನು ಸುಪರ್ದು ಪಡೆಯದೇ ಇದ್ದಲ್ಲಿ(Physical Possession) ಅಥವಾ ಪರಿಹಾರ ಹಣವನ್ನು ಭೂಮಾಲೀಕರಿಗೆ ಪಾವತಿಸದಿದ್ದಲ್ಲಿ ಅಂತಹ ಭೂಸ್ವಾಧೀನ ಪ್ರಕ್ರಿಯೆಗಳು ಅಸಿಂಧುಗೊಳ್ಳುತ್ತವೆ. ರಾಜ್ಯ ಸರ್ಕಾರವು ಜಮೀನನ್ನು ಪುನ: ಸ್ವಾಧೀನಪಡಿಸಲು ಇಚ್ಛಿಸಿದಲ್ಲಿ ಹೊಸ ಕಾಯ್ದೆಯನ್ವಯ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ.

(ಆ)ಭೂಸ್ವಾಧೀನ ಕಾಯ್ದೆ 1894ರನ್ವಯ ಐತೀರ್ಪು ಅನುಮೋದನೆಯಾಗಿದ್ದರೂ ಸಹ ಸ್ವಾಧೀನಗೊಂಡ ಜಮೀನುಗಳ ಹೆಚ್ಚಿನ ಫಲಾನುಭವಿಗಳಿಗೆ ಪರಿಹಾರದ ಮೊತ್ತವನ್ನು ಅವರ ಖಾತೆಗೆ ಜಮಾ ಮಾಡದೇ ಇದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಹೊಸ ಕಾಯ್ದೆಯನ್ವಯ ಪರಿಹಾರವನ್ನು ಎಲ್ಲಾ ಫಲಾನುಭವಿಗಳಿಗೆ ನಿಗಧಿಪಡಿಸಿ ನೀಡಬೇಕಾಗುತ್ತದೆ(ಈ ಪ್ರಕರಣದಲ್ಲಿ ಹಿಂದಿನ ಭೂಸ್ವಾಧೀನ ಪ್ರಕ್ರಿಯೆ ಅಸಿಂಧು ಗೊಳ್ಳುವುದಿಲ್ಲ).

ಮೇಲಿನ ಮಾರ್ಗಸೂಚಿಗಳನ್ನು ಎಲ್ಲಾ ಭೂಸ್ವಾಧೀನಾಧಿಕಾರಿಗಳು, ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರುಗಳು ಹಾಗೂ ಭೂಸ್ವಾಧೀನ ಕಾಯ್ದೆ 1894ರನ್ವಯ ಈ ಹಿಂದೆ ಸರ್ಕಾರದಿಂದ ಅಧಿಕಾರ ಪ್ರತ್ಯಾಯೋಜಿಸಲ್ಪಟ್ಟ ಆಯುಕ್ತರು, ಕರ್ನಾಟಕ ಗೃಹ ಮಂಡಳಿ/ಆಯುಕ್ತರು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ, ಬಾಗಲಕೋಟೆ/ವಿಶೇಷ ಜಿಲ್ಲಾಧಿಕಾರಿ, ಬೃಹತ್ ನೀರಾವರಿ ಯೋಜನೆಗಳು, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ ಇವರುಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಭೂಸ್ವಾಧೀನ ಕಾಯ್ದೆ 1894ರನ್ವಯ ಕೈಗೊಂಡಿರುವ ಪ್ರಕ್ರಿಯೆಗಳನ್ನು ಮುಂದುವರಿಸಿ ಪೂರ್ಣಗೊಳಿಸುವಲ್ಲಿ ಏನಾದರೂ ತೊಡಕುಗಳು/ಗೊಂದಲಗಳು ಉಂಟಾದಲ್ಲಿ ಸರ್ಕಾರದಿಂದ ಲಿಖಿತ ಸ್ಪಷ್ಟೀಕರಣ ಪಡೆಯತಕ್ಕದ್ದು. ದಿನಾಂಕ 01–01–2014ರಿಂದ ಹೊಸ ಕಾಯ್ದೆ ಜಾರಿಗೆ ಬಂದಿರುವುದರಿಂದ ದಿನಾಂಕ 31–12–2013 ರವರೆಗೆ ಭೂಸ್ವಾಧೀನ ಕಾಯ್ದೆ 1894ರನ್ವಯ ಪ್ರಾರಂಭಿಸಲಾಗಿದ್ದ ಪ್ರಕ್ರಿಯೆಗಳನ್ನು ಮುಂದುವರಿಸಿ ಪೂರ್ಣಗೊಳಿಸಲು ಹೊಸ ಕಾಯ್ದೆ ಕಲಂ–24, 103 ಮತ್ತು 114 ಹಾಗೂ The General Clauses Act 1897ರ ಸೆಕ್ಷನ್–6 ರನ್ವಯ ಈ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಈ ಹಿಂದಿನ ಭೂಸ್ವಾಧೀನ ಪ್ರಕ್ರಿಯೆಗಳನ್ನು ಜರೂರಾಗಿ ಪೂರ್ಣಗೊಳಿಸಲು ಸಂಬಂಧಪಟ್ಟವರು ಕ್ರಮ ಕೈಗೊಳ್ಳತಕ್ಕದ್ದು. ಇದರಲ್ಲಿ ಏನಾದರೂ ವಿಳಂಬ ಉಂಟಾದಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಪ್ರಕರಣಗಳಲ್ಲಿ ಮುಂದಿನ ಪ್ರಕ್ರಿಯೆಗಳನ್ನು ಅಂದರೆ, ಅಂತಿಮ ಘೋಷಣೆಯನ್ನು ಹಳೆಯ ಕಾಯ್ದೆ ಕಲಂ 6ರ ಪ್ರಕಾರವೇ ಹೊರಡಿಸಲು ಅನುಮತಿಸುವುದರಿಂದ, ಹೊಸ ಕಾಯ್ದೆ ಕಲಂ–30 ಉಪ ಕಲಂ (3)ರಲ್ಲಿ ಹೇಳುವಂತೆ ಶೇ.12 ರಷ್ಟು ಹೆಚ್ಚಿನ ಮೊತ್ತವನ್ನು ಮಾರುಕಟ್ಟೆ ಧಾರಣೆ ಮೇಲೆ **Social Impact Assessment Study**, ಬಗ್ಗೆ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಮಂಜೂರು ಮಾಡಲು ಹೊಸ ಕಾಯ್ದೆ ಅಡಿಯಲ್ಲಿ ಐತೀರ್ಪು ರಚಿಸುವಾಗ ಅವಕಾಶವಿರುವುದಿಲ್ಲ.

ಹಳೆಯ ಕಾಯ್ದೆ ಪ್ರಕಾರ ಮುಂದುವರಿಸಬಹುದಾದ ಪ್ರಕ್ರಿಯೆಗಳನ್ನು ಮುಂದುವರಿಸುವ ಪೂರ್ವದಲ್ಲಿ ಹಳೆಯ ಕಾಯ್ದೆ ಅಡಿಯಲ್ಲಿ ಅಂತಿಮ ಘೋಷಣೆ ಮಾಡಲು ನಿಗಧಿಪಡಿಸಿದ ಕಾಲಮಿತಿ ಮುಗಿದಿದೆಯೆ, ಇಲ್ಲವೇ ಎಂಬುದನ್ನು ಪರಿಶೀಲಿಸತಕ್ಕದ್ದು. ಒಂದು ವೇಳೆ ಮುಗಿದಿದ್ದರೆ, ಯಾವುದೇ ನ್ಯಾಯಾಲಯದಿಂದ ತಡೆಯಾಜ್ಞೆ ವಗೈರೆ ಇತ್ತೇ ಎನ್ನುವುದನ್ನು ಪರಿಶೀಲಿಸಿ ಮುಂದುವರಿಯತಕ್ಕದ್ದು.

ಶಂಕರಗೌಡ ಸಿ.ದೊಡ್ಡಮನಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಸ್ವಾಧೀನ–1&3).

PR. 421

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ದಿನಾಂಕ: 31–03–2014ಕ್ಕೆ ಅವಧಿ ಪೂರ್ಣಗೊಂಡ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ: 31–03–2015ರವರೆಗೆ ಕಾರ್ಯಾವಧಿಯನ್ನು ಮುಂದುವರೆಸಲು ಮಂಜೂರಾತಿ ಬಗ್ಗೆ

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಲಾ 112 ಎಲ್‌ಸಿಇ 2012, ದಿನಾಂಕ : 28–12–2012
2. ಸರ್ಕಾರದ ಆದೇಶ ಸಂಖ್ಯೆ : ಒಇ 120 ಪಿಪಿಇ 2013, ದಿನಾಂಕ : 18–07–2013
3. ಸರ್ಕಾರದ ಆದೇಶ ಸಂಖ್ಯೆ : ಒಇ 582 ಪಿಪಿಇ 2011, ದಿನಾಂಕ : 17–01–2013
4. ಸರ್ಕಾರದ ಆದೇಶ ಸಂಖ್ಯೆ : ಒಇ 107 ಪಿಪಿಇ 2013, ದಿನಾಂಕ : 16–12–2013
5. ಸರ್ಕಾರದ ಆದೇಶ ಸಂಖ್ಯೆ : ಒಇ 299 ಪಿಪಿಇ 2011, ದಿನಾಂಕ : 06–02–2014
6. ಸರ್ಕಾರದ ಆದೇಶ ಸಂಖ್ಯೆ : ಒಇ 582 ಪಿಪಿಇ 2013, ದಿನಾಂಕ : 06–02–2014
7. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರದ ಸಂಖ್ಯೆ: ಡಿಪಿಎನ್/ಸಿಶಾ–1/253/2013–14, ದಿನಾಂಕ: 24–03–2014
8. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಒಇ 387 ಪಿಪಿಇ 2012, ದಿನಾಂಕ: 02–06–2014

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ : 1ರಲ್ಲಿನ ಸರ್ಕಾರಿ ಆದೇಶದಲ್ಲಿ 39 ಶೀಘ್ರಗತಿ ನ್ಯಾಯಾಲಯಗಳನ್ನು ದಿನಾಂಕ: 31–03–2015ರವರೆಗೆ ಮುಂದುವರೆಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: 2ರಲ್ಲಿನ ಸರ್ಕಾರಿ ಆದೇಶದಲ್ಲಿ, ಮೇಲೆ ಓದಲಾದ ಕ್ರಮ ಸಂಖ್ಯೆ: 1ರಲ್ಲಿನ ಸರ್ಕಾರಿ ಆದೇಶದನ್ವಯ ಮುಂದುವರೆಸಲಾದ 39 ಶೀಘ್ರಗತಿ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸೃಜನೆಯಾಗಿರುವ 39 ಸರ್ಕಾರಿ ಅಭಿಯೋಜಕರ ತಾತ್ಕಾಲಿಕ ಹುದ್ದೆಗಳನ್ನೂ ಸೇರಿಸಿಕೊಂಡು ಒಟ್ಟು 945 ವಿವಿಧ ವರ್ಗದ ತಾತ್ಕಾಲಿಕ ಹುದ್ದೆಗಳನ್ನು ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ: 6ರಲ್ಲಿನ ಸರ್ಕಾರಿ ಆದೇಶದನ್ವಯ ಮುಂದುವರೆಸಲಾಗಿರುವ ಮಂಗಳೂರು ನಗರದ ಆರಕ್ಷಕ ಆಯುಕ್ತರ ಕಛೇರಿಗೆ ಹೊಂದಿಕೊಂಡಂತೆ ಇಲಾಖೆಗೆ ಸೃಜನೆಯಾಗಿರುವ ಕಾನೂನು ಅಧಿಕಾರಿ (ಕಿರಿಯ) ಇವರ ಒಂದು ತಾತ್ಕಾಲಿಕ ಹುದ್ದೆಯನ್ನು ಒಟ್ಟಾರೆ 946 ಹುದ್ದೆಗಳನ್ನು ತಾತ್ಕಾಲಿಕ ಹುದ್ದೆಗಳನ್ನು ಏಕರೂಪವಾಗಿ ದಿನಾಂಕ: 01–04–2013ರಿಂದ ಅಥವಾ ಅವಧಿ ಪೂರ್ಣಗೊಂಡ ದಿನಾಂಕದಿಂದ ದಿನಾಂಕ: 31–03–2014ರ ವರೆಗೆ ಅಥವಾ ಸಂಬಂಧಪಟ್ಟ ಹುದ್ದೆಗಳ ನ್ಯಾಯಾಲಯಗಳು/ಕಛೇರಿಗಳು ಅಸ್ತಿತ್ವದಲ್ಲಿರುವವರೆಗೆ ಅಥವಾ ಸದರಿ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 3ರಲ್ಲಿನ ಸರ್ಕಾರಿ ಆದೇಶದನ್ವಯ ಮಂಗಳೂರಿನ 1ನೇ ಮತ್ತು 2ನೇ ಸಿ.ಜೆ. (ಹಿ.ವಿ.) ಮತ್ತು ಸಿ.ಜೆ..ಎಂ. ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ತಲಾ ಒಂದರಂತೆ 02 ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಅವರ ಕಛೇರಿಗಳಿಗೆ ತಲಾ ಒಂದರಂತೆ 02 ಶೀಘ್ರಲಿಪಿಗಾರರ ಒಟ್ಟಾರೆ 04 ಹುದ್ದೆಗಳನ್ನು ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ : 4ರಲ್ಲಿನ ಸರ್ಕಾರಿ ಆದೇಶದನ್ವಯ ಮೈಸೂರಿನ ಪ್ರಧಾನ ಹಿರಿಯ ಸಿ.ಜೆ. ಮತ್ತು ಸಿ.ಜೆ.ಎಂ. ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಒಂದು ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಅವರ ಕಛೇರಿ ಒಂದು ಶೀಘ್ರಲಿಪಿಗಾರರ ಒಟ್ಟು 02 ಹುದ್ದೆಯನ್ನು, ಒಟ್ಟಾರೆ 06 ಹುದ್ದೆಗಳನ್ನು ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ಅಥವಾ ಸಂಬಂಧಪಟ್ಟ ನ್ಯಾಯಾಲಯಗಳು/ಕಛೇರಿಗಳು ಅಸ್ತಿತ್ವದಲ್ಲಿ ಇರುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಸೃಜಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 5ರಲ್ಲಿನ ಸರ್ಕಾರಿ ಆದೇಶದನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ 28 ಕಾನೂನು ಅಧಿಕಾರಿ (ಕಿರಿಯ) ಮತ್ತು 07 ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಒಟ್ಟಾರೆ 35 ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ)ರ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: 7ರಲ್ಲಿನ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ : 1 ರಿಂದ 6 ರಲ್ಲಿನ ಆದೇಶಗಳನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಮುಂದುವರೆಸಿರುವ ಈ ಕೆಳಕಂಡ ವೃಂದಗಳ ಒಟ್ಟಾರೆ 917 ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ: 01–04–2014 ರಿಂದ ಅಥವಾ ಅವುಗಳ ಅವಧಿ ಪೂರ್ಣಗೊಂಡ ದಿನಾಂಕದಿಂದ

ಏಕರೂಪವಾಗಿ ದಿನಾಂಕ: 31–03–2016ರವರೆಗೆ ಅಥವಾ ಸಂಬಂಧಪಟ್ಟ ನ್ಯಾಯಾಲಯಗಳು / ಕಛೇರಿಗಳು ಅಸ್ತಿತ್ವದಲ್ಲಿರುವವರೆಗೆ ಅಥವಾ ಸದರಿ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಕ್ರ.ಸಂ.	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ
1.	ಕಾನೂನು ಅಧಿಕಾರಿ (ಹಿರಿಯ)	2
2.	ಸರ್ಕಾರಿ ಅಭಿಯೋಜಕರು : 82 ಶೀಘ್ರ ವಿಲೇವಾರಿ ನ್ಯಾಯಾಲಯಗಳ ಸರ್ಕಾರಿ ಅಭಿಯೋಜಕರ ಹುದ್ದೆಗಳು : 39	121
3.	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು	28
4.	ಕಾನೂನು ಅಧಿಕಾರಿ (ಕಿರಿಯ)	11
5.	ಸಹಾಯಕ ಸರ್ಕಾರಿ ಅಭಿಯೋಜಕರು	235
6.	ಲೆಕ್ಕ ಪರಿಶೋಧನಾಧಿಕಾರಿಗಳು	01
7.	ಆಡಳಿತಾಧಿಕಾರಿ	01
8.	ಅಧೀಕ್ಷಕರು	23
9.	ಶೀಘ್ರಲಿಪಿಗಾರರು	110
10.	ಪ್ರಥಮ ದರ್ಜೆ ಸಹಾಯಕರು	13
11.	ಸಹಾಯಕ ಗ್ರಂಥಪಾಲಕರು	1
12.	ದ್ವಿತೀಯ ದರ್ಜೆ ಸಹಾಯಕರು	16
13.	ಬೆರಳಚ್ಚುಗಾರರು	180
14.	ವಾಹನ ಚಾಲಕರು	2
15.	ಅಟೆಂಡರ್	43
16.	ದಲಾಯತ್	119
17.	ಗ್ರೂಪ್–ಡಿ	10
18.	ಜಾಡಮಾಲಿ	1
	ಒಟ್ಟು	**917**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ : 8ರಲ್ಲಿನ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ಒಟ್ಟಾರೆ 54 ದಲಾಯತರ (45 ದಲಾಯತರ, 08 ಗ್ರೂಪ್–ಡಿಯ ಹಾಗೂ 01 ಜಾಡಮಾಲಿಯ ಹುದ್ದೆ) ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸಿದೆ. ಆದ್ದರಿಂದ ಸದರಿ 54 ದಲಾಯತರ ಹುದ್ದೆಗಳನ್ನು ತಾತ್ಕಾಲಿಕ ಹುದ್ದೆಗಳೆಂದು ಮುಂದುವರೆಸುವುದನ್ನು ಕೈಬಿಡಲಾಗಿದೆ. ಉಳಿದ 863 ತಾತ್ಕಾಲಿಕ ಹುದ್ದೆಗಳ ಕಾರ್ಯಾವಧಿಯನ್ನು ಮುಂದುವರೆಸಲು ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 149 ಪಿಪಿಇ 2014, ಬೆಂಗಳೂರು, ದಿನಾಂಕ: 3ನೇ ಜುಲೈ, 2014

ಮೇಲ್ಕಂಡ ಪ್ರಸ್ತಾವನೆಯ ಅನ್ವಯ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಅಂಕಣ (2)ರಲ್ಲಿನ ವಿವಿಧ ವೃಂದದ ಅಂಕಣ (3)ರಲ್ಲಿನ ಸಂಖ್ಯೆಯ ಅಂಕಣ (4)ರಲ್ಲಿನ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವಿವಿಧ ನ್ಯಾಯಾಲಯ/ಕಛೇರಿಗಳಲ್ಲಿನ ಈ ಕೆಳಕಂಡಂತಿರುವ **ಒಟ್ಟಾರೆ 863 ತಾತ್ಕಾಲಿಕ ಹುದ್ದೆಗಳ ಕಾರ್ಯಾವಧಿಯನ್ನು ಏಕರೂಪವಾಗಿ ದಿನಾಂಕ: 01-04-2014 ರಿಂದ ಅಥವಾ ಅವಧಿ ಪೂರ್ಣಗೊಂಡ ದಿನಾಂಕದಿಂದ ದಿನಾಂಕ : 31-03-2015ರ ವರೆಗೆ ಅಥವಾ ಸದರಿ ಹುದ್ದೆಗಳ ನ್ಯಾಯಾಲಯಗಳು/ಕಛೇರಿಗಳು ಅಸ್ಥಿತ್ವದಲ್ಲಿರುವವರೆಗೆ ಅಥವಾ ಸದರಿ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸಿ ಆದೇಶ ಹೊರಡಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಮಂಜೂರಾತಿ ನೀಡಿದೆ.**

ಕ್ರ.ಸಂ.	**ಹುದ್ದೆಗಳ ಹೆಸರು**	**ಹುದ್ದೆಗಳ ಸಂಖ್ಯೆ**
1.	ಕಾನೂನು ಅಧಿಕಾರಿ (ಹಿರಿಯ)	2
2.	ಸರ್ಕಾರಿ ಅಭಿಯೋಜಕರು : 82 ಶೀಘ್ರ ವಿಲೇವಾರಿ ನ್ಯಾಯಾಲಯಗಳ ಸರ್ಕಾರಿ ಅಭಿಯೋಜಕರ ಹುದ್ದೆಗಳು : 39	121
3.	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು	28
4.	ಕಾನೂನು ಅಧಿಕಾರಿ (ಕಿರಿಯ)	11
5.	ಸಹಾಯಕ ಸರ್ಕಾರಿ ಅಭಿಯೋಜಕರು	235
6.	ಲೆಕ್ಕ ಪರಿಶೋಧನಾಧಿಕಾರಿಗಳು	01
7.	ಆಡಳಿತಾಧಿಕಾರಿ	01
8.	ಅಧೀಕ್ಷಕರು	23
9.	ಶೀಘ್ರಲಿಪಿಗಾರರು	110
10.	ಪ್ರಥಮ ದರ್ಜೆ ಸಹಾಯಕರು	13
11.	ದ್ವಿತೀಯ ದರ್ಜೆ ಸಹಾಯಕರು	16
12.	ಸಹಾಯಕ ಗ್ರಂಥಪಾಲಕರು	1
13.	ಬೆರಳಚ್ಚುಗಾರರು	180
14.	ವಾಹನ ಚಾಲಕರು	2
15.	ಅಟೆಂಡರ್	43
16.	ದಲಾಯತ್	74
17.	ಗ್ರೂಪ್-ಡಿ	2
	ಒಟ್ಟು	**863**

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು 2014-ನ್ಯಾಯಪರಿಪಾಲನೆ 114-ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು-02-ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, 002-ಅಧಿಕಾರಿಗಳ ವೇತನ, 003-ಸಿಬ್ಬಂದಿ ವೇತನ ಈ ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10–07–1996ರಲ್ಲಿ ಇಲಾಖಾ ಪ್ರಧಾನ/ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಆದೇಶ ಸಂಖ್ಯೆ: ಆಇ 58 ಎಸ್‌ಆರ್‌ಎಸ್ 79, ದಿನಾಂಕ: 07–09–1979ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವೆಂದ್ರಪ್ಪ ಕಟ್ಟಿಮನಿ,
ಸರ್ಕಾರದ ಅಧೀನ ಕಾರ್ಯದರ್ಶಿ,
